# ಬೃಹಚ್ಚರಣ


ಸಂಪಾದಕ ಸಮಿತಿ

| | |
|---|---|
| ಶ್ರೀ ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ಶ್ರೀ ವಿ. ಎಸ್. ಮಣಿ | ಸದಸ್ಯರು |
| ಶ್ರೀ ಶ್ರೀನಿವಾಸ್ ಎಸ್.ಪಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಶ್ರೀ ಕೆ.ಪಿ. ನಟರಾಜನ್ | ಸಂಪಾದಕ |



ಸಂಪುಟ : 8 ಸಂಚಿಕೆ : 1 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜನವರಿ–ಮಾರ್ಚ್ 2018


## ಸುಭಾಷಿತ

ಅವಮಾನಗಳನ್ನು ಎದುರಿಸುವ ಸಾಮರ್ಥ್ಯವಿದ್ದರೆ ಸನ್ಮಾನ ಸ್ವೀಕರಿಸುವ ಯೋಗ್ಯತೆ ಬಂದೇ ಬರುತ್ತದೆ.

ಯಾರ ಮಾತಿಗೂ ನೀ 'ಅಂಜಬೇಡ'. ಯಾರ ಆಸೆಯಂತೆಯೂ 'ನೀ ಇರಬೇಡ'. ಯಾರನ್ನು ನಂಬಿ ನೀ 'ಬದುಕಬೇಡ'. ನಿನ್ನ ಜೀವನ ನಿನಗೆ ನೀ ಮರೆಯಬೇಡ.

## ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ,

ತಮಗೂ ತಮ್ಮ ಕುಟುಂಬದ ಸದಸ್ಯರೆಲ್ಲರಿಗೂ 'ಶ್ರೀ ವಿಳಂಬಿ' ಸಂವತ್ಸರ, ಶ್ರೀರಾಮನವಮಿ ಹಾಗೂ ಶ್ರೀ ಶಂಕರ ಜಯಂತಿಯು ಶುಭ ತರಲೆಂದು ಕಾರ್ಯಕಾರಿ ಸಮಿತಿ ಪರವಾಗಿ ಹಾರೈಸುತ್ತೇನೆ. ಸಂಘವು ಹೊರತಂದ 2018ರ ವಾರ್ಷಿಕ ದಿನಚರಿಯ ಪ್ರಾಯೋಜಕರಿಗೆ ಧನ್ಯವಾದಗಳು.

ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ 20.2.2018 ಮಂಗಳವಾರ ನಡೆದ ನಾಗಾರಾಧನೆ ಹಾಗೂ ಶ್ರೀ ಶ್ರೀನಿವಾಸ ದೇವರ ರಥೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಹಕಾರ ನೀಡಿದ ನಿಮಗೆಲ್ಲರಿಗೂ ಆಭಾರಿ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಿಪ್ರ ಬೃಹತ್ ಸಮಾವೇಶದಲ್ಲಿ ಭಾಗವಹಿಸಿದ ಸಂಘದ ಸದಸ್ಯರಿಗೆ ವಂದನೆಗಳು.

ಮುಂಬರುವ ವಾರ್ಷಿಕ ಸರ್ವ ಸದಸ್ಯರ ಸಭೆಗೆ ತಾವೆಲ್ಲರೂ ಭಾಗವಹಿಸಿ ಸಹಕಾರ ನೀಡುವಿರೆಂದು ಆಶಿಸುತ್ತೇನೆ.




**ತಮ್ಮವ,**

**■ ಎಸ್. ಸೋಮಸುಂದರ**

## ಸಂಪಾದಕೀಯ

ಆತ್ಮೀಯರಿಗೆ ನಮಸ್ಕಾರ

ತಮ್ಮೆಲ್ಲರ ಸಹಕಾರದಿಂದ ಇದುವರೆವಿಗೆ 'ಬೃಹಚ್ಚರಣ' ತ್ರೈಮಾಸಿಕ ಹದಿನೇಳು ಸಂಚಿಕೆಗಳಿಗೆ ಸಂಪಾದಕನಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಟ್ಟ ಕಾರ್ಯಕಾರಿ ಸಮಿತಿ ಹಾಗೂ ಸಂಪಾದಕ ಮಂಡಳಿಗೆ ಧನ್ಯವಾದಗಳು. ಮುಂದಿನ ದಿನಗಳಲ್ಲಿ ಇನ್ನೂ ಸುಂದರವಾಗಿ ಉಪಯುಕ್ತ ಲೇಖನಗಳೊಂದಿಗೆ ಸಂಚಿಕೆಗಳು ಬರಲೆಂದು ಆಶಿಸುತ್ತಾ, ಸದಸ್ಯರ ಹೆಚ್ಚು ಭಾಗವಹಿಸುವಿಕೆ ನಿರೀಕ್ಷಿಸುತ್ತಾ, ಸದಸ್ಯರಲ್ಲಿ ಯಾರಾದರೂ ಮುಂದೆ ಬಂದಲ್ಲಿ ಸಂತೋಷದಿಂದ ಸಂಪಾದಕರಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುವ ಆಶಯ ಹೊಂದಿದ್ದೇನೆ.



**ಕೆ.ಪಿ. ನಟರಾಜ್**

ಸಂಪಾದಕ

## ನಾಗಾರಾಧನೆ ವಿಶೇಷಾಂಕ



ಬೃಹಚ್ಚರಣ ಬಂಧುಗಳೇ,

ಶ್ರೀ ಶ್ರೀ ಶ್ರೀ ಶಂಕರ ಭಗವತ್ಪಾದರ ಪ್ರೇರಣೆಯಂತೆ ಕಳೆದ ವರ್ಷ ನಮ್ಮ ಸಂಘದ ವತಿಯಿಂದ "ಶಂಕರ ಜಯಂತಿ" ಕಾರ್ಯಕ್ರಮ ನಡೆಸಲಾಗಿತ್ತು.

ಸದಸ್ಯರ ಇಚ್ಛೆಯಂತೆ ಈ ವರ್ಷವೂ ಶಂಕರ ಜಯಂತಿಯಂದು ಭಜನೆ, ಕೀರ್ತನೆಗಳ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ತಂಡದ ಮುಖ್ಯ ಗಾಯಕರು, ಬೃಹಚ್ಚರಣ ಸಮುದಾಯದ ಕುಟುಂಬದವರಾಗಿದ್ದು, ಜೊತೆಗೆ ಇತರೆ ಬಂಧುಗಳು, ಸ್ನೇಹಿತರನ್ನು ಸಹಕಲಾವಿದರನ್ನಾಗಿ ಜೊತೆಗೂಡಿಸಿ ಕೊಳ್ಳಲು ಯಾವುದೇ ಅಭ್ಯಂತರವಿರುವುದಿಲ್ಲ.

ಸಂಗೀತ ಕಾರ್ಯಕ್ರಮವು ಭಜನೆ, ಕೀರ್ತನೆಗಳಿಗೆ ಮಾತ್ರ ಸೀಮಿತ, ಗಾಯಕರು ತಂಡಗಳಲ್ಲಿ ಗುಂಪಾಗಿ ಪಾಲ್ಗೊಳ್ಳಲು ಮಾತ್ರ ಅವಕಾಶ. ಆಸಕ್ತಿಯುಳ್ಳ ಸಂಗೀತ ಕಲಾವಿದರು ತಮ್ಮ ತಂಡದ ವಿವರಗಳನ್ನು ಮುಂಚಿತವಾಗಿ ಶ್ರೀಮತಿ ಸರಸ್ವತಿ ನಟರಾಜ್ ಅಥವಾ ಸಂಘದ ಇತರೆ ಯಾವುದೇ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ವಿವರಗಳನ್ನು ತಿಳಿಸಲು ಮನವಿ.

**ಕಾರ್ಯಕ್ರಮದ ವಿವರ**

ದಿನಾಂಕ 20.04.2018, ಶುಕ್ರವಾರ, ಸಮಯ – ಸಂಜೆ 6.00ರಿಂದ

**ಸ್ಥಳ: ಶ್ರೀ ಭ್ರಮರಾಂಬ ಮಲ್ಲಿಕಾರ್ಜುನ ದೇವಾಲಯದ ಆವರಣ.** ಎನ್.ಆರ್.ಕಾಲೋನಿ, ಬೆಂಗಳೂರು., ಲಘು ಉಪಹಾರ – ರಾತ್ರಿ 8.30ಕ್ಕೆ

ಸಮುದಾಯದ ಎಲ್ಲ ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ಕಲಾವಿದರನ್ನು ಪ್ರೋತ್ಸಾಹಿಸಿ ಭಗವಂತನ ಕೃಪೆಗೆ ಪಾತ್ರರಾಗಲು ಮನವಿ.

ಓಂ ನಮಃ ಶಿವಾಯ

ಧನ್ಯವಾದಗಳೊಂದಿಗೆ.

ಮೈ.ಮಂ.ದ್ರಾ.ಬೃ.ಸಂಘ.



**ವಿ.ಎಸ್. ಮಣಿ**

ಕಾರ್ಯದರ್ಶಿ

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

**ಕಾರ್ಯಕಾರಿ ಸಮಿತಿ : 2015–2018**

ಅಧ್ಯಕ್ಷರು
**ಎಸ್. ಸೋಮಸುಂದರ, 99001 13298**

ಉಪಾಧ್ಯಕ್ಷರು
**ಎಚ್.ಕೆ. ಶಶಿಧರ್, 98451 73766**

ಕಾರ್ಯದರ್ಶಿ
**ವಿ.ಎಸ್. ಮಣಿ, 98450 55582**

ಸಹಕಾರ್ಯದರ್ಶಿ
**ಅರುಣ್ ವಿ., 98801 66001**

ಖಜಾಂಚಿ
**ಎಸ್. ಸತ್ಯನಾರಾಯಣ, 99809 45699**


ಲೆಕ್ಕಪರಿಶೋಧಕರು
**ಎಸ್.ಸಿ. ಶ್ರೀನಿವಾಸ, 98453 76949**

ಗೌರವ ಸದಸ್ಯರು
**ಮಂಜುನಾರಾಯಣ್ ಕೆ. 98861 14279**
**ಟಿ.ಎಸ್. ಮಣಿ, 98451 76335**
**ಟಿ.ಎಸ್. ರಮೇಶನ್, 96638 74531**
**ಟಿ.ಪಿ. ಸೂರ್ಯ ನಾರಾಯಣ, 99454 84268**
**ಸರಸ್ವತಿ ನಟರಾಜನ್, 94806 19730**
**ಕೆ. ಜಿ. ವೆಂಕಟೇಶ್, 99640 12687**
**ಆರ್. ಗಣೇಶ್ ಶ್ರೀಧರ್, 9880187686**
**ಟಿ. ನಾಗೇಶ್, 99806 62118**
**ಬಿ.ಎನ್.ಜಿ. ಪ್ರಸಾದ್, 9845128229**
**ಸುಬ್ರಹ್ಮಣ್ಯಂ ಬೆಂಗಳೂರು, 94498 69667**
**ಕೆ.ಬಿ.ಎಸ್. ಶರ್ಮ, 94820 87344**
**ಅನಂತ ಕೆ.ಎಸ್. 97404 44222**
**ಶಂಕರ ಪ್ರಸಾದ್ ಬಿ.ಆರ್. 98456 63833**
**ಕೆ. ಗುಂಡಪ್ಪ, 9845332315**
**ಟಿ.ಎನ್. ರವಿಕಿರಣ್, 9972677005**
**ಸುನಿಲ್ ವಿಜಯ್‌ಕುಮಾರ್, 9986953605**



ಮೂಲ ಕಲ್ಯಾಣ ಕೋದಂಡರಾಮ ದೇವರು

# ಕೋದಂಡರಾಮಸ್ವಾಮಿ ಗರುಡೋತ್ಸವ, ಬ್ರಹ್ಮರಥೋತ್ಸವ ಸರ್ಜಾಪುರ



ಗರುಡೋತ್ಸವದಲ್ಲಿ ಶ್ರೀ ರಾಮಚಂದ್ರ ಸ್ವಾಮಿ



ರಾಮಚಂದ್ರಸ್ವಾಮಿ ಬ್ರಹ್ಮರಥೋತ್ಸವ

ಸರ್ಜಾಪುರದಲ್ಲಿ ಶ್ರೀ ಕಲ್ಯಾಣ ಕೋದಂಡ ರಾಮಸ್ವಾಮಿ ದೇವಸ್ಥಾನವು ಬಹಳ ವಿಶೇಷವಾಗಿದ್ದು, ಸುಮಾರು 800 ವರ್ಷಗಳ ಇತಿಹಾಸವಿದೆ. ಅನಾದಿಕಾಲದಿಂದಲೂ ಆಚರಿಸಿಕೊಂಡುಬಂದ ಬ್ರಹ್ಮರಥೋತ್ಸವ ಆಚರಣೆ ಈ ಸುತ್ತಮುತ್ತಲಿನ ಪ್ರಾಂತ್ಯಕ್ಕೆ ಹೆಸರುವಾಸಿಯಾಗಿದೆ. ಪ್ರತೀ ಸಂವತ್ಸರದ ಮಾಘ ಮಾಸದ ಕೃಷ್ಣ ಪಕ್ಷದ ಮಖಾ ನಕ್ಷತ್ರದಂದು ಶ್ರೀ ಕಲ್ಯಾಣ ಕೋದಂಡರಾಮಸ್ವಾಮಿಯ ಬ್ರಹ್ಮರಥೋತ್ಸವ ನಡೆಯುತ್ತದೆ. ವೈಕಾನಸ ಆಗಮೋಕ್ತ ಪ್ರಕಾರವಾಗಿ ಸಾಪ್ತಾಹಿಕ ಆಚರಣೆಯಂತೆ ಧ್ವಜಾರೋಹಣದಿಂದ ಧ್ವಜಾಅವರೋಹಣದವರೆಗೂ ಏಳು ದಿನಗಳ ಉತ್ಸವಾದಿ ಭಗವತ್ ಕೈಂಕರ್ಯಗಳು ವಿಜೃಂಭಣೆಯಾಗಿ ನಡೆಯುತ್ತವೆ. ಇವುಗಳಲ್ಲಿ ಶೇಷವಾಹನೋತ್ಸವ, ಗಜವಾಹನೋತ್ಸವ, ಹನುಮಂತೋತ್ಸವ, ಅಶ್ವವಾಹನೋತ್ಸವ, ವಸಂತೋತ್ಸವ, ಗಂಧಪುಡಿಉತ್ಸವ ಮತ್ತು ಗರುಡೋತ್ಸವಗಳು ನೆರವೇರುತ್ತವೆ. ಶ್ರೀ ಸ್ವಾಮಿಯವರ ಕಲ್ಯಾಣ ಮಹೋತ್ಸವದ ಮರುದಿನ ಪ್ರಾತಃಕಾಲ ಗರುಡೋತ್ಸವ ಬಹಳ ವಿಶೇಷವಾಗಿರುತ್ತದೆ. ಬೃಹಚ್ಚರಣ ಬಂಧುಗಳಾದ ನಮ್ಮ ತಾತಂದಿರಾದ ಕೀ॥ಶೇ॥ ಶ್ರೀ ಹೆಚ್.ಶ್ರೀನಿವಾಸಯ್ಯ ಮತ್ತು ಕೀ॥ಶೇ॥ಶ್ರೀಮತಿ ಅಮ್ಮಯಮ್ಮ ದಂಪತಿಗಳು ಗರುಡವಾಹನವನ್ನು ಸುಮಾರು 85 ವರ್ಷಗಳ ಹಿಂದೆ ದೇವಾಲಯಕ್ಕೆ ಕೊಡುಗೆಯಾಗಿ ನೀಡಿರುತ್ತಾರೆ. ಅಂದಿನಿಂದಲೂ ಈ ಉತ್ಸವದ ಸೇವೆಯನ್ನು ನಮ್ಮ ಕುಟುಂಬದ ವತಿಯಿಂದ ನಿರಂತರವಾಗಿ ನಡೆಸಿಕೊಂಡು ಬಂದಿರುತ್ತೇವೆ. ಅಂದು ಸ್ವಾಮಿಯವರ ಉತ್ಸವವು ನಮ್ಮ ಮನೆಯ ಆವರಣದಲ್ಲಿ ವಿಶೇಷ ಪೂಜೆಗಳೊಂದಿಗೆ ಹಾಗೂ ನೆರೆದ ಭಕ್ತಾದಿಗಳಿಗೆಲ್ಲಾ ಪ್ರಸಾದ ವಿನಿಯೋಗದೊಂದಿಗೆ ನಡೆಯುತ್ತದೆ. ಮರುದಿನ ಏಳು ಅಂತಸ್ತಿನ ಅಲಂಕೃತ ರಥವುಳ್ಳ ಬ್ರಹ್ಮರಥೋತ್ಸವವು ಬಹಳ ವಿಜೃಂಭಣೆಯಾಗಿ ನೆರವೇರುತ್ತದೆ ಮತ್ತು ರಾತ್ರಿ ಪಲ್ಲಕ್ಕಿ ಉತ್ಸವಾದಿಗಳು, ಕರಗ ಮಹೋತ್ಸವ ಹಾಗೂ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುತ್ತದೆ.



✍ ಹೆಚ್.ಜಿ.ಅನಂತ್
ಸರ್ಜಾಪುರ, 9845011464

# ನಾಗಾರಾಧನೆ 2018 ಪಕ್ಷಿನೋಟ

ಆನೇಕಲ್ ತಾಲ್ಲೂಕು ಕಿತ್ತಗಾನಹಳ್ಳಿ ಕ್ಷೇತ್ರದ ನಾಗಾರಾಧನೆಯು ದಿನಾಂಕ 20.02.2018ರ ಮಂಗಳವಾರದಂದು ನಮ್ಮ ಸಮುದಾಯದ ಹಿರಿಯರು ಹಾಕಿಕೊಟ್ಟ ವೈದಿಕ ಸಂಪ್ರದಾಯ ಅನುಸರಿಸುವಂತಿತ್ತು. ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ತನಿ ಎರೆಯುವ ಪೂಜಾ ಕೈಂಕರ್ಯವು ಕೌಂಡಿಣ್ಯ ಗೋತ್ರದವರಿಂದ ಆರಂಭವಾಯಿತು.

ಈ ಕಾರ್ಯಕ್ರಮ ನಡೆಯುತ್ತಿರುವಾಗಲೇ ವಳ್ಳಿ ದೇವಯಾನಿ ಸಮೇತ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ವೇದ ಘೋಷ, ಮಂಗಳವಾದ್ಯಗಳೊಂದಿಗೆ ಕ್ಷೇತ್ರದ ದೇವಾಲಯದಿಂದ ನಾಗರಕಟ್ಟೆಗೆ ತರಲಾಯಿತು.

ಭಕ್ತಾದಿಗಳು ನಾಗ ಶಿಲೆಗಳಿಗೆ ಷೋಡಷೋಪಚಾರ ಪೂಜೆಯನ್ನು ನೆರವೇರಿಸಿ ಶ್ರೀ ಸುಬ್ರಹ್ಮಣ್ಯ ರೂಪವಾದ ಬ್ರಹ್ಮಚಾರಿ ವಟುಗಳಿಗೆ ಕಾಲ್ತೊಳೆದು ಪೂಜಿಸಿ ದಕ್ಷಿಣೆ ಸಮೇತ ವಸ್ತ್ರಗಳನ್ನು ನೀಡಿ ಧನ್ಯರಾಗಿ ಕೃತಾರ್ಥಭಾವ ಪಡೆದರು. ಪೂಜೆಗೊಂಡ ನಾಗರಕಟ್ಟೆ ಯಲ್ಲಿನ ನಾಗಶಿಲೆಗಳು ನೋಡಲು ಕಣ್ಮನ ತಣಿಯುವಂತಿತ್ತು.

ಕಿತ್ತಿಗಾನಹಳ್ಳಿ ಕ್ಷೇತ್ರದ ಶ್ರೀ ಗಣಪತಿ, ಭೂನೀಳಾ ಸಮೇತ ಶ್ರೀ ಶ್ರೀನಿವಾಸ, ಗಾಯತ್ರಿದೇವಿ, ವಳ್ಳಿ ದೇವಸೇನ ಸಮೇತ ಶ್ರೀ ಸುಬ್ರಹ್ಮಣ್ಯ ಮತ್ತು ನವಗ್ರಹಗಳಿಗೆ ಬೆಳಿಗ್ಗೆ ಅಭಿಷೇಕ, ಅಲಂಕಾರ, ಅರ್ಚನೆಗಳು ನೆರವೇರಿತು. ಅನ್ನದಾನಕ್ಕೆ ದೇಣಿಕೆ ನೀಡಿದ ಭಕ್ತಾದಿಗಳ ಹೆಸರನ್ನು ಹೇಳಿ ಪೂಜೆಗೆ ಸಂಕಲ್ಪವನ್ನು ಮಾಡಲಾಗಿತ್ತು.

ತನಿ ಎರೆದ ಭಕ್ತಾದಿಗಳಿಗೆ ಬೆಳಗಿನ ಉಪಹಾರವನ್ನು ಏರ್ಪಡಿಸ ಲಾಗಿತ್ತು. ಎಂದಿನಂತೆ ಈ ಬಾರಿಯೂ ನಾಗರಕಟ್ಟೆಗೆ ಉತ್ಸವ ಬಂದ ಮೇಲೆ ಆರ್. ಕೃಷ್ಣಮೂರ್ತಿಯವರ ವಂಶಸ್ಥರು ಪ್ರಾಯೋಜಿಸಿದ ಪಾನಕ, ಕೋಸಂಬರಿ, ಹುಳಿ ಅವಲಕ್ಕಿ ನೈವೇದ್ಯ ಮಾಡಿ ಭಕ್ತಾದಿಗಳಿಗೆ ಪ್ರಸಾದ ವಿತರಿಸಿದರು. ಹೂವಿನ ಸೇವೆಯನ್ನು ಕಿತ್ತಿಗಾನಹಳ್ಳಿಯ ಶ್ರೀ ಛಾಯಾಪತಿ ಮತ್ತು ಮಕ್ಕಳು ಪ್ರಾಯೋಜಿಸಿದರು. ಮಹಾ ಮಂಗಳಾರತಿ ನಂತರ ಪ್ರಸಾದ ಭೋಜನ ಏರ್ಪಡಿಸಲಾಗಿತ್ತು. ಭೋಜನದ ಮುಂಚೆ 108 ಬಾರಿ 'ಸುಬ್ಬ ಸುಬ್ಬ ಗೋವಿಂದ, ಸುಬ್ರಹ್ಮಣ್ಯ ಗೋವಿಂದ' ನಾಮ ಜಪ ಮಾಡಲಾಯಿತು. ಎಲ್ಲರಿಗೂ ಭಕ್ತಿಯಲ್ಲಿ ತೇಲುವಂತಿತ್ತು. ಸಮಯ ವ್ಯರ್ಥ ಮಾಡದೆ ಸಾರ್ಥಕ ಮಾಡಿಕೊಂಡಂತಿತ್ತು. ಪ್ಯಾಕ್ ಮಾಡಿದ ವಡೆ ಪ್ರಸಾದವನ್ನು ಹಂಚಲಾಯಿತು. ಬಂದ ಭಕ್ತಾದಿಗಳು ಪೂಜೆ ಮಾಡಿ ಪ್ರಸಾದ ಸ್ವೀಕರಿಸಿ ಸಂತೋಷದಿಂದ ಧನ್ಯರಾದರು. ಈ ಬಾರಿಯ ವಿಶೇಷವೆಂದರೆ ಕಿತ್ತಿಗಾನಹಳ್ಳಿಯ ದೇವಸ್ಥಾನದ ಆವರಣವು ಹೊಸ ರೂಪ ಪಡೆದು ನಾಗರಕಟ್ಟೆ ಹತ್ತಲು ಸುಲಭವಾಗಲೆಂದು ಕಬ್ಬಿಣದ ಸರಳುಗಳನ್ನು ಹಾಕಿಸಿದ್ದು ಭಕ್ತಾದಿಗಳಿಗೆ ಅನುಕೂಲಕರವಾಗಿದ್ದು ಎಲ್ಲರ ಮೆಚ್ಚುಗೆ ಗಳಿಸಿತು. ಬಿಸಿಲಿದ್ದರೂ ಎಲ್ಲೆಡೆ ಷಾಮಿಯಾನ ವ್ಯವಸ್ಥೆ ಇದ್ದಿದ್ದು ಆಬಾಲ ವೃದ್ಧರಿಗೂ ನೆಮ್ಮದಿ ಎನಿಸಿತು. ಪ್ರತೀ ಕುಟುಂಬ ದಿಂದಲೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಘಕ್ಕೆ ಸಹಕಾರ ದೊರಕಿದ್ದಲ್ಲದೆ ಸದಸ್ಯರು ಸ್ವಯಂ ಪ್ರೇರಿತರಾಗಿ ದೇಣಿಗೆ ನೀಡಿದರು.

ನಮ್ಮ ಗಮನಕ್ಕೆ ಬಂದಂತೆ ನಾಗರಕಟ್ಟೆಗೆ ಮೆಟ್ಟಿಲು ಹತ್ತಲು ತ್ರಾಸವಾಗಿದ್ದುದರಿಂದ ಈ ಬಾರಿ ಸಂಘದ ಖಜಾಂಚಿ ಸತ್ಯನಾರಾಯಣ್ ರವರ ನೇತೃತ್ವದಲ್ಲಿ ಹಾಕಿಸಿದ ಕಬ್ಬಿಣದ ಕೈಪಿಡಿಯು ಎಲ್ಲರಿಗೆ ಅನುಕೂಲವಾಗಿತ್ತು. ಈ ಕಾರ್ಯಕ್ಕೆ ಧನ ಸಹಾಯ ನೀಡಿದ ಕಾರ್ಯಕಾರಿ ಸಮಿತಿಯವರಲ್ಲದೆ ಸಮುದಾಯದ ಸದಸ್ಯರಿಗೂ ಸಂಘ ಆಭಾರಿ.

ರುಚಿಯಾಗಿ, ಶುಚಿಯಾಗಿ ಪ್ರಸಾದ (ಭೋಜನ)ವನ್ನು ತಯಾರಿಸಿದ ಬಾಣಸಿಗರಿಗೆಲ್ಲಾ ಸಂಘದ ಸದಸ್ಯರಾದ ಶ್ರೀ ಎಸ್.ಸಿ. ಶ್ರೀನಿವಾಸ್ ಮತ್ತು ಇತರರು ಪಂಚೆ, ಶಲ್ಯ ನೀಡಿ ಗೌರವಿಸಿದರು.

ಸಂಘವು ಈ ಬಾರಿ ಪರಿಸರ ಮಾರಕ ಪ್ಲಾಸ್ಟಿಕ್‌ನ್ನು ತ್ಯಜಿಸಿ ಲೋಹದ ಹುಂಡಿಗಳನ್ನು ರಿಯಾಯಿತಿ ದರದಲ್ಲಿ ಸದಸ್ಯರಿಗೆ ವಿತರಿಸಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಪಿ. ಸೂರ್ಯನಾರಾಯಣ್ ರವರು ಮೈಸೂರು ಒಂಟಿಕೊಪ್ಪಲ್ ಪಂಚಾಂಗವನ್ನು ರಿಯಾಯಿತಿ ದರದಲ್ಲಿ ವಿತರಿಸಿದರು. ವಿಶೇಷವಾಗಿ ಈ ಬಾರಿಯೂ ವಾಹನಗಳ ನಿಲುಗಡೆಗಾಗಿ ವ್ಯವಸ್ಥೆ ಮಾಡಲಾಗಿತ್ತು. ಸಂಘದ ಅಧ್ಯಕ್ಷರು ಸಮುದಾಯದವರೆಲ್ಲರಿಗೂ ಇದೇ ರೀತಿ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಕೋರಿದರು.



✍ ಆರ್. ರಮೇಶ್
9886034048

ನಾಗಾರಾಧನೆಯ ಛಾಯಾಚಿತ್ರಗಳು : **ಶಿವಕುಮಾರ್ ನಟರಾಜ್**


















ನಾಗಾರಾಧನೆಯ ಛಾಯಾಚಿತ್ರಗಳು : **ಶಿವಕುಮಾರ್ ನಟರಾಜ್**

















# ಮೌಂಟ್ ಸೋಮ ಅಮೆರಿಕಾದ ಶಿವ

ಪ್ರವಾಸೋದ್ಯಮ



ಉತ್ತರ ಅಮೆರಿಕಾದ ನಾರ್ತ್ ಕೆರೋಲಿನಾದಲ್ಲಿ ಬ್ಲೂ ರಿಡ್ಜ್ ಮೌಂಟನ್ ಎಂಬ ಒಂದು ಚಿಕ್ಕ ಹಳ್ಳಿಯಲ್ಲಿ ಬೆಟ್ಟದ ಮೇಲೆ ಶಿವನ ದೇವಸ್ಥಾನವಿದೆ.

ನಾವಿರುವುದು ಹ್ಯೂಸ್ಟನ್‌ನಲ್ಲಿ. ಅಲ್ಲಿಂದ 3–4 ಗಂಟೆಗಳ ಕಾಲ ವಿಮಾನದಲ್ಲಿ ಪ್ರಯಾಣ ಮಾಡಿದರೆ ನಾರ್ತ್ ಕೆರೋಲಿನಾ ಸೇರಬಹುದು. ಅಲ್ಲಿ ವಿಮಾನ ನಿಲ್ದಾಣದಿಂದ 6–7 ಗಂಟೆ ಪ್ರಯಾಣ ಮಾಡಿದರೆ ಬ್ಲೂ ರಿಡ್ಜ್ ಮೌಂಟ್ ಸಿಗುತ್ತದೆ. ಅದೊಂದು ಚಿಕ್ಕ ಹಳ್ಳಿ. ಅದರ ಸುತ್ತಮುತ್ತ ಬೆಟ್ಟ ಮತ್ತು ಪರ್ವತ ಪ್ರದೇಶವಾಗಿದೆ. ಹಳ್ಳಿ ಮತ್ತು ಬೆಟ್ಟ ಎಲ್ಲ ಸೇರಿ 448 ಎಕರೆಯ ವಿಸ್ತಾರ ಪ್ರದೇಶವಾಗಿದೆ.

ಅದು ಡಾ. ಮೈಕೆಲ್ ಮಾಮಾಸ್ ಎಂಬುವವರಿಗೆ ಅವರ ಪೂರ್ವಜರಿಂದ ಬಂದ ಜಾಗ.

ಅಲ್ಲಿ ಬೆಟ್ಟದ ಮೇಲೆ ಸುಂದರವಾದ ಸೋಮೇಶ್ವರ ಲಿಂಗ ಪ್ರತಿಷ್ಠಾಪಿಸಿ, ದೇವಸ್ಥಾನ ಮಾಡಿದ್ದಾರೆ. ಮೈಕೆಲ್ ಅವರಿಗೆ ಹಿಂದೂ ಧರ್ಮ ಮತ್ತು ದೇವರಲ್ಲಿ ನಂಬಿಕೆ. ಶ್ರದ್ಧೆ, ಗೌರವ ಇಟ್ಟು ಅವರೇ ಈ ಶಿವನ ದೇವಸ್ಥಾನಕ್ಕೆ ಕಾರಣೀಭೂತರಾಗಿದ್ದಾರೆ. ಅವರಿಗೆ ದೇವಸ್ಥಾನ ಮಾಡಲು ಕನಸಾಗಿತ್ತಂತೆ.

2002ರಲ್ಲಿ ಕಟ್ಟಡದ ಕಾರ್ಯ ಶುರು ಮಾಡಿ, ಭಾರತದಿಂದ ಶಿವಲಿಂಗ ತರಿಸಿ, ಪ್ರತಿಷ್ಠೆ ಮಾಡಿದ್ದಾರೆ. ಕರಿಶಿಲೆಯ ಶಿವಲಿಂಗ, ಸುಮಾರು ಮೂರು–ಮೂರುವರೆ ಅಡಿ ಇರಬಹುದಾದಂಥಹುದು. ಅದರ ಮುಂದುಗಡೆ ಬಿಳಿ ಗ್ರಾನೈಟ್ ಶಿಲೆಯ ನಂದಿಯೂ ಇದೆ. ಅದರ ಪಕ್ಕದಲ್ಲಿ 15 ಅಡಿ ಎತ್ತರದ ಭವ್ಯವಾದ ಹನುಮಂತನ ವಿಗ್ರಹ ಇದೆ. ಹ್ಯಾಂಡ್ ಕರ್ವ್ಡ್ ಗ್ರಾನೈಟ್ ಸ್ಟ್ಯಾಚೂ ಈ ಹನುಮಂತನ ವಿಗ್ರಹವನ್ನು ಅಲ್ಲೇ ನಾರ್ತ್ ಕೆರೋಲಿನಾದಲ್ಲಿ ನೆಲೆಸಿರುವ 'ಗಣಪತಿ ಸ್ಥಪತಿ ಎಂಬುವ ಶಿಲ್ಪಿಯೊಬ್ಬರು ಕೆತ್ತನೆ ಮಾಡಿದ್ದಾರೆ. ದೇವಸ್ಥಾನ 2011ರಲ್ಲಿ ಸಂಪೂರ್ಣವಾಗಿದೆ.

ಅದೇ ಜಾಗದಲ್ಲಿ ಮತ್ತೊಂದು ಕಡೆ ವಾಟರ್ ಫಾಲ್ಸ್. ಅಂದರೆ ನೀರಿನ ಒರತೆಯಲ್ಲಿ ಜಲಪಾತ ಮಾಡಿ ಅದರ ಕೆಳಗೆ ಚಿಕ್ಕ ಶಿವಲಿಂಗ ಸ್ಥಾಪಿಸಿದ್ದಾರೆ. ಸದಾಕಾಲ ಶಿವನ ತಲೆಯ ಮೇಲೆ ನೀರು ಬೀಳುತ್ತಿರುತ್ತದೆ. ಇದನ್ನು 'ಗಂಗಾ ಪಾರ್ಕ್' ಎಂದು ಕರೆಯುತ್ತಾರೆ. ಪ್ರಶಾಂತವಾದ ಸ್ಥಳವಾಗಿದೆ. ಅದರ ಸುತ್ತಲಿನ ಸ್ಥಳವೆಲ್ಲಾ ಬಣ್ಣ ಬಣ್ಣದ ಹೂವಿನ ಗಿಡಗಳಿಂದ ಕಂಗೊಳಿಸಿ, ತುಂಬಾ ಸುಂದರವಾದ, ಪ್ರಶಾಂತವಾದ ಸ್ಥಳ. ಮನಸ್ಸಿಗೆ ಆನಂದ ನೆಮ್ಮದಿ ತರುವಂತಹುದು.



ನಿತ್ಯವೂ ದೇವರಿಗೆ ಪೂಜಾ ಕೈಂಕರ್ಯಗಳನ್ನು ತಪ್ಪದೆ ನಡೆಸುತ್ತಾರೆ. ಭಕ್ತಾದಿಗಳಿಗೆ ಪ್ರಸಾದ ಭೋಜನ ವ್ಯವಸ್ಥೆಯೂ ಉಂಟು. ದೂರ ದೂರದಿಂದ ಭಕ್ತಾದಿಗಳು ಬರುತ್ತಾರೆ. ಶಿವರಾತ್ರಿ, ಕಾರ್ತೀಕ ಮಾಸಗಳಲ್ಲಿ ವಿಶೇಷವಾಗಿ ಪೂಜೆ, ಹವನ, ಹೋಮಗಳು ಡಾ. ಮೈಕೆಲ್ ಅವರ ನೇತೃತ್ವದಲ್ಲಿ ನಡೆಯುತ್ತದೆ. ಅವರ ಕುಟುಂಬ ದವರೂ ಸಹ ಭಾಗವಹಿಸಿ ಮೇಲ್ವಿಚಾರಣೆ ನಡೆಸುತ್ತಾರೆ. ಅವರೆಲ್ಲಾ ಶಾಖಾಹಾರಿಗಳಾಗಿ ಸಾತ್ವಿಕ ರಾಗಿದ್ದಾರೆ. ಅಡುಗೆಯವರೂ ಸಹ ಇಂಡಿಯನ್, ಅಮೆರಿಕನ್ ಇಬ್ಬರೂ ಇದ್ದಾರೆ.

ಪೂಜೆ ಮಾಡುವ ಪುರೋಹಿತರು ಆಂಧ್ರದ ಕಡೆಯಿಂದ ಬಂದು ಕುಟುಂಬ ಸಮೇತರಾಗಿ ಬೆಟ್ಟದ ಕೆಳಗಿರುವ ಹಳ್ಳಿಯಲ್ಲಿ ವಾಸಿಸುತ್ತಾರೆ. ಎಲ್ಲರೂ ಮಂತ್ರಬಲ್ಲ ಘನಪಾಠಿಗಳೇ ಆಗಿದ್ದಾರೆ.

ಆ ಹಳ್ಳಿಯಲ್ಲಿ ಹೂ, ಹಣ್ಣು, ತರಕರಿ ಎಲ್ಲ ಪೂಜೆಗೆ ಬೇಕಾದ ಸಾಮಗ್ರಿ ದೊರೆಯುತ್ತದೆ. ಅವರೇ ತೋಟದಲ್ಲಿ ಬೆಳೆಯುತ್ತಾರೆ. ಚಿಕ್ಕದಾದ ಫಾರಂ ಹೌಸ್ ಇದ್ದು ದನಕರುಗಳಿದ್ದು, ಅಭಿಷೇಕಕ್ಕೆ ಹಾಲು, ಮೊಸರು ಸಮೃದ್ಧಿಯಾಗಿ ದೊರೆಯುತ್ತದೆ.

ಬಹಳ ಮಂದಿ ಅಮೆರಿಕನ್ಸ್, ಹಿಂದೂಗಳು ಅಲ್ಲಿ ನೆಲೆಸಿದ್ದಾರೆ. ಎಲ್ಲರೂ ಶಾಖಾಹಾರಿಗಳು, ದೇವರ ಸೇವೆ, ಪೂಜೆ ಕೈಂಕರ್ಯಗಳಲ್ಲಿ ಭಾಗವಹಿಸುತ್ತಾರೆ.

ಇದೊಂದು ಶ್ಲಾಘನೀಯವಾದ ವಿಚಾರವೇ ಸರಿ. ಬೆಟ್ಟದ ಮೇಲೆ ಸ್ವಲ್ಪ ದೂರದಲ್ಲಿ ಜೋಡಿ ನಾಗರವಿರುವುದು ನಾಗದೇವ ಪ್ರತಿಷ್ಠೆಯನ್ನು ಅಂದರೆ ನಾಗರಕಲ್ಲಿನ ಪ್ರತಿಷ್ಠೆ ಮಾಡಿದ್ದಾರೆ. ಅದು ಆಶ್ಚರ್ಯದ ಸಂಗತಿಯಾಗಿದೆ.

ಅಮೆರಿಕಾದಲ್ಲಿರುವಂತಹ ನಮ್ಮ ಸಮುದಾಯದ ಬಂಧುಗಳು ಒಮ್ಮೆ ಅವಕಾಶ ಮಾಡಿಕೊಂಡು ನಾರ್ತ್ ಕೆರೊಲಿನಾದ ಈ ಬೆಟ್ಟದ ಮೇಲಿರುವ ಸೋಮೇಶ್ವರ ದೇವಸ್ಥಾನವನ್ನು ನೋಡಿ ಧನ್ಯರಾಗಿ.

✍ ಗಾಯತ್ರಿ ಶೇಷಾಚಲ
9449730073



# ಬ್ರಹ್ಮ ರಥೋತ್ಸವ



ಆನೇಕಲ್ ತಾಲ್ಲೂಕು ಕಿತ್ತಿಗಾನಹಳ್ಳಿ ಕ್ಷೇತ್ರದಲ್ಲಿ ದಿ. 21.2.2018ರ ಬುಧವಾರದಂದು ಭೂನೀಳಾ ಸಮೇತ ಶ್ರೀ ಶ್ರೀನಿವಾಸದೇವರ ಬ್ರಹ್ಮರಥೋತ್ಸವವು ಪ್ರತಿ ವರ್ಷದಂತೆ ಈ ವರ್ಷವೂ ವೇದಬ್ರಹ್ಮ ಶ್ರೀ ನಂಜುಂಡ ದೀಕ್ಷಿತರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು. ಕಿತ್ತಿಗಾನಹಳ್ಳಿಯ ವಾಸಿಗಳೇ ಅಲ್ಲದೇ ಬೃಹಚ್ಚರಣ ಸಮುದಾಯದವರು ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದಲೂ ಭಕ್ತಾದಿಗಳು ಕ್ಷೇತ್ರಕ್ಕೆ ಆಗಮಿಸಿ ಭಕ್ತಿ ಪೂರ್ವಕವಾಗಿ ಬ್ರಹ್ಮರಥೋತ್ಸವದಲ್ಲಿ ಪಾಲ್ಗೊಂಡು ಧನ್ಯತೆಯನ್ನು ಪಡೆದರು.

ಬೆಳಿಗ್ಗೆಯಿಂದಲೇ ಪ್ರಾರಂಭವಾದ ಅಭಿಷೇಕ, ಕಲಾಶಾರ್ಚನೆ, ಸುದರ್ಶನ ಮತ್ತು ಗಾಯತ್ರಿ ಹೋಮಗಳಲ್ಲದೆ ಮಧ್ಯಾಹ್ನ ಭೂ ನೀಳಾ ಸಮೇತ ಶ್ರೀ ಶ್ರೀನಿವಾಸದೇವರನ್ನು ಬಣ್ಣ ಬಣ್ಣದ ಹೂಗಳಿಂದ ಅಲಂಕರಿಸಿದ ಬ್ರಹ್ಮರಥೋತ್ಸವವನ್ನು ಕಂಡು ಭಕ್ತಾದಿಗಳು, ಸೇವಾಕರ್ತರು ಕಣ್ಣು ತುಂಬಿಕೊಂಡರು.


ನೆರೆದವರು ಫಾಲ್ಗುಣ ಮಾಸದ ಬಿಸಿಲನ್ನೂ ಲೆಕ್ಕಿಸದೆ ಭಕ್ತಿಯಿಂದ ದೇವರ ಸೇವೆಯಲ್ಲಿ ನಿರತರಾಗಿದ್ದರು. ತೀರ್ಥಪ್ರಸಾದ ವಿನಿಯೋಗ ದೊಂದಿಗೆ ರಥೋತ್ಸವವು ನೆರೆದವರಲ್ಲಿ ಭಕ್ತಿಸಂಚಲನೆ ಮೂಡಿಸಿತ್ತು.



✍ ಸರ್ಜಾಪುರ ಶ್ರೀನಿವಾಸ್
9845376949

## 3ಡಿ ಚಿತ್ರಗಳು







✍ ಸೋನಿಯಾ ಶಿವರಾಂ
9845024620

# ಶುಭಾಶಯಗಳು

ಸಂಘದ ಸದಸ್ಯರಾದ ಬಿ.ಎನ್. ಶ್ರೀನಿವಾಸಯ್ಯ (ನಿವೃತ್ತ ರಾಷ್ಟ್ರೀಯ ಡೈರಿ ಅಧಿಕಾರಿ)ರವರಿಗೆ ಇತ್ತೀಚೆಗೆ 100ನೇ ವರ್ಷದ ಹುಟ್ಟುಹಬ್ಬವನ್ನು ಕುಟುಂಬದ ಸದಸ್ಯರು ಆಚರಿಸಿದರು. ಶತಾಯು ಶ್ರೀ ಶ್ರೀನಿವಾಸನ್ ಬೈಪನಹಳ್ಳಿ ನಾರಾಯಣ್‌ರವರಿಗೆ ಆರೋಗ್ಯ ನೆಮ್ಮದಿ ಸದಾ ಇರಲೆಂದು ಸಂಘ ಶುಭ ಹಾರೈಸುತ್ತದೆ.



ಸಮುದಾಯದ ಹಿರಿಯ ಸದಸ್ಯ ಪೋಷಕರಾದ ಶ್ರೀ ಆರ್.ಎಸ್. ಪದ್ಮನಾಭನ್‌ರವರಿಗೆ 80 ವರ್ಷ ತುಂಬಿದ ಈ ಸುಸಂದರ್ಭದಲ್ಲಿ ಬೃಹಚ್ಚರಣ ಸಂಘಕ್ಕೆ ಶ್ರೀಯುತರು ನೀಡಿರುವ ರೂ. 5,000/– ದೇಣಿಗೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸುತ್ತಾ ಶ್ರೀಯುತರ ಕುಟುಂಬಕ್ಕೆ ಸಂಘ ಶುಭ ಹಾರೈಸುತ್ತದೆ.

* * *



ನಮ್ಮ ಸಮುದಾಯದ ಹಿರಿಯ ಸದಸ್ಯ, ಪೋಷಕರಾದ ಶ್ರೀ ಎಸ್. ಶಿವರಾಮ್‌ರವರ 80ನೇ ಹುಟ್ಟುಹಬ್ಬವು 'ಆರ್ಟ್ ಆಫ್ ಲೀವಿಂಗ್'ನಲ್ಲಿ ದಿ. 11.2.2018ರ ಭಾನುವಾರದಂದು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಕುಟುಂಬ ಮತ್ತು ಬಂಧುವರ್ಗದವರ ಸಮ್ಮುಖದಲ್ಲಿ ನೆರವೇರಿತು. ಸಂಘವು ಶ್ರೀಯುತರಿಗೆ ಶುಭ ಹಾರೈಸುತ್ತದೆ.

* * *

ಸಂಘದ ಹಿರಿಯ ಸದಸ್ಯೆ ಶ್ರೀ ಜಯರಾಂ ರವರ 70ನೇ ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿ ಶ್ರೀಮತಿ ಶೀಲಾ ಜಯರಾಂ ಹಾಗೂ ಶ್ರೀ ಬಿ.ವಿ. ಜಯರಾಂರವರು ಸಂಘಕ್ಕೆ ನೀಡಿರುವ ರೂ. 10,000/– ದೇಣಿಗೆಯನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ ಶ್ರೀಯುತರ ಕುಟುಂಬಕ್ಕೆ ಶುಭ ಹಾರೈಸಿದೆ.

* * *

ಸಂಘದ ಹಿರಿಯ ಸದಸ್ಯೆ ಹಾಗೂ ವಿದುಷಿ ಶ್ರೀಮತಿ ಗಾಯತ್ರಿ ರಾಜಾಪುರರವರಿಗೆ 80 ವರ್ಷ ತುಂಬಿದ ಸಂದರ್ಭದಲ್ಲಿ ಸಂಘವು ಶುಭ ಹಾರೈಸುತ್ತದೆ.

# ವಾರ್ತಾ ಚಿತ್ರ



ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆಯಲ್ಲಿ 1996ರಿಂದ ಸತತವಾಗಿ ಮಾನಸಿಕ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಿ ಉಚಿತವಾಗಿ ಸೇವೆ ಸಲ್ಲಿಸುತ್ತಿರುವ ಡಾ.ಜಿ. ಸ್ವಾಮಿನಾಥ್‌ರವರನ್ನು ದಿ.4.3.2018ರಂದು ಸ್ವಾಮಿ ವಿವೇಕಾನಂದ ಯುವ ವೇದಿಕೆಯಿಂದ ಗೌರವಿಸಲಾಯಿತು.



ಸಂಘದ ಪೋಷಕರಾದ ಶ್ರೀ ರಾಜಾಪುರ್ ಭಗವಾನ್‌ರವರನ್ನು ಸಮಾಜ ಸೇವೆಗಾಗಿ ಕೆಂಪೇಗೌಡ ಪ್ರಶಸ್ತಿಯನ್ನು 21.2.2018ರಂದು ಬಸವನಗುಡಿಯಲ್ಲಿ ನೀಡಿ ಗೌರವಿಸಲಾಯಿತು.



ಸಂಘದ ಪೋಷಕ ರಾಜಾಪುರ ಎಸ್. ರಾಜಗೋಪಾಲ್‌ರವರ ಪುತ್ರ ಡಾ. ಶ್ರೀನಾಥ್‌ರವರಿಗೆ ರಾಷ್ಟ್ರಪತಿ ಪ್ರಶಸ್ತಿಯನ್ನು ಈಸ್ಟರ್ನ್ ಕಮಾಂಡ್ ಮಿಲಿಟರಿ ಆಸ್ಪತ್ರೆಯಲ್ಲಿ ಸಲ್ಲಿಸಿದ ಸೇವೆಗಾಗಿ ನೀಡಿ ಗೌರವಿಸಲಾಯಿತು.




ಸಂಘದ ಸದಸ್ಯ ಶ್ರೀ ಎನ್.ಎಸ್. ಸೂರ್ಯಪ್ರಕಾಶ್‌ರವರ ಪುತ್ರ ಚಿ. ಅವಿನಾಶ್‌ರವರನ್ನು ಅಮೆಜಾನ್ CEO, Jeff Bezosರವರು ಉತ್ತಮ Best Leader Award ನೀಡಿ ಸನ್ಮಾನಿಸಿರುತ್ತಾರೆ.




ಸಂಘದ ಸದಸ್ಯ ಶ್ರೀ ಅಜಯ್ ರಾಜಾಪುರ್‌ರವರು ಮಾಡುತ್ತಿರುವ ನಿಸ್ವಾರ್ಥ ಸೇವೆಗಾಗಿ ನಗರದ ವಿವೇಕಾನಂದ ಸಾಧನ ಕೇಂದ್ರದಲ್ಲಿ ಸನ್ಮಾನಿಸಲಾಯಿತು.



ಸಂಘದ ಸದಸ್ಯ ಶ್ರೀ ಕಾರ್ತಿಕ್ ರವಿಕುಮಾರ್‌ರವರು ದಿ. 17.2.2018 ರಂದು ಮುಂಬೈನಲ್ಲಿ ನಡೆದ ಉಸ್ತಾದ್ ಅಲ್ಲಾರಖ ಹಾಗೂ ಪಾಲ್ಘಾಟ್ ಮಣಿ ಅಯ್ಯರ್ ಸ್ಮರಣಾರ್ಥ ತಾಳವಾದ್ಯ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು.

## ಯುವ ಪ್ರತಿಭೆ ಕು. ಸಂಪದಾ



ನಮ್ಮ ಸಮುದಾಯದ ಹಿರಿಯರಾದ ಕರ್ನಾಟಕ ಕಲಾಶ್ರೀ ದಿ. ಶಂಕರನಾರಾಯಣ್ ರವರ ಮೊಮ್ಮಗಳು ಕು. ಸಂಪದಾ ಗುರುಪ್ರಸಾದ್ ರಂಗಪ್ರವೇಶ ಕಾರ್ಯಕ್ರಮವನ್ನು ದಿ. 17.2.2018ರಂದು ಜಯನಗರದ ಜೆ.ಎಸ್.ಎಸ್. ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ತಂದೆ ಶ್ರೀ ಗುರುಪ್ರಸಾದ್ ಹಿರಿಯ ಬ್ಯಾಂಕ್ ಅಧಿಕಾರಿ ಲಲಿತ ಕಲೆಗಳಿಗೆ ಪ್ರಥಮ ಸ್ಥಾನ ನೀಡುವವರು. ತಾಯಿ ಶ್ರೀಮತಿ ಸುಮಾರವರು ಗಮಕ ಕಲಾವಿದೆ. ಸಂಪದಾರವರು ಸ್ಫೂರ್ತಿ ನೃತ್ಯ ಶಾಲೆಯ ಭರತನಾಟ್ಯ ವಿದೂಷಿ ಶ್ರೀಮತಿ ಸುಮ ರಾಜೇಶ್ ರವರ ಶಿಷ್ಯೆ.

ಕುಮಾರಿ ಸಂಪದ ತನ್ನ ಎಂಟನೇ ವರ್ಷದಲ್ಲೇ ಧಾರವಾಡದಲ್ಲಿ ಭರತನಾಟ್ಯ ವಿದೂಷಿ ಶ್ರೀಮತಿ ರೋಹಿಣಿಯವರಲ್ಲಿ ನೃತ್ಯಾಭ್ಯಾಸ ಪ್ರಾರಂಭಿಸಿದರು. 13 ವರ್ಷಗಳ ಸತತ ಪರಿಶ್ರಮ ನೃತ್ಯಾಭ್ಯಾಸದಲ್ಲಿದೆ. ಇದಲ್ಲದೆ ಗಮಕ, ಹಿಂದೂಸ್ಥಾನಿ, ಕರ್ನಾಟಕ ಸಂಗೀತದಲ್ಲಿ ಪರಿಶ್ರಮವಿದೆ. ಕರ್ನಾಟಕ ಸರ್ಕಾರದ ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಪರೀಕ್ಷೆಗಳಲ್ಲಿ ಶ್ರೇಷ್ಠ ದರ್ಜೆಯಲ್ಲಿ ತೇರ್ಗಡೆ ಯಾಗಿದ್ದು, ಸದ್ಯದಲ್ಲಿ ಜೈನ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಗಾಗಿ ವಿದ್ಯಾಭ್ಯಾಸ ಮುಂದುವರೆಸುತ್ತಿದ್ದಾರೆ.

ಸಂಗೀತ ವಿದ್ವಾನ್ ಡಿ.ಎಸ್. ಶ್ರೀವತ್ಸರವರ ನಟವಾಂಗ ಹಾಗೂ ವೃಂದದವರ ಸಹಕಾರದೊಂದಿಗೆ ಸಂಪದಾಳ ರಂಗಪ್ರವೇಶ ನೃತ್ಯ ಕಾರ್ಯಕ್ರಮವು ಅಮೋಘವಾಗಿ ಮೂಡಲು ಸಹಕಾರಿಯಾಯಿತು. ಬೆಳಕು ರಂಗಸಜ್ಜಿಕೆ ಅತ್ಯುತ್ತಮವಾಗಿತ್ತು.

'ಶಿವಾರಾಧನೆ' ಶೀರ್ಷಿಕೆಯ ನೃತ್ಯ ಪ್ರದರ್ಶನದಲ್ಲಿ ವಿವಿಧ ಭಾಷೆಯ ರಚನೆಗಳಿಗೆ ನರ್ತಿಸಿದ ಸಂಪದಾರವರು ವಿಶೇಷವಾಗಿ ಬಸವಣ್ಣನವರ 'ಉಳ್ಳವರು ಶಿವಾಲಯವ ಮಾಡುವರು' ವಚನದ ಅಭಿನಯಕ್ಕೆ ನೆರೆದಿದ್ದ ಹಿರಿಯ ಕಲಾವಿದರ ಹಾಗೂ ಸಭಿಕರ ಮೆಚ್ಚುಗೆ ದೊರಕಿತು. ನೃತ್ಯ ಕ್ಷೇತ್ರದಲ್ಲಿ ಕು. ಸಂಪದಾ ಪ್ರವರ್ಧಮಾನಕ್ಕೆ ಬಂದು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಅತ್ಯುತ್ತಮ ನೃತ್ಯ ಕಲಾವಿದೆ ಆಗಲೆಂದು ಬೃಹಚ್ಚರಣ ಸಂಘವು ಹಾರೈಸುತ್ತದೆ.

–ಸಂ.

## ಚೈತ್ರ ಮಾಸ : ಯುಗಾದಿ ಹಬ್ಬದ ಮಹತ್ವ

ಚೈತ್ರ ಮಾಸಕ್ಕೆ ವಿಷ್ಣು ನಿಯಾಮಕ. ಚೈತ್ರ ಶುಕ್ಲ ಪ್ರತಿಪತ್ತಿನಂದು ಯುಗಾದಿ ಹಬ್ಬದ ದಿನ ನೂತನ ವರ್ಷಾರಂಭ. ಈ ದಿನ ಅರುಣೋದಯದ ಕಾಲ ದಲ್ಲಿಯೇ ಎದ್ದು ಭಗವಂತನ ನಾಮಸ್ಮರಣೆ ಮಾಡುತ್ತಾ ದೇವರ ಮನೆಗೆ ಹೋಗಿ ದೇವರ ಮುಂದೆ ಇಟ್ಟಿರುವ ಪಂಚಾಂಗ, ತರಕಾರಿ, ಧಾನ್ಯ, ಫಲ–ತಾಂಬೂಲಗಳು, ಎಣ್ಣೆ, ನೆಲ್ಲಿಕಾಯಿ, ಮುಂತಾದ ವಸ್ತುಗಳನ್ನು ಹೊಸ ಕನ್ನಡಿಯ ಮೂಲಕ ನೋಡಬೇಕು. ಯಾವ ಯಾವ ವಸ್ತುಗಳನ್ನು ಕನ್ನಡಿಯ ಮೂಲಕ ನೋಡುವೆವೋ ಅವುಗಳನ್ನು ಬಿಂಬ ರೂಪಿ ಪರಮಾತ್ಮನು ದೊರಕಿಸಿ ಕೊಡುವನು. ಮುಖ ಪ್ರಕ್ಷಾಲನೆಯನ್ನು ಮಾಡಿ ಗಜೇಂದ್ರ ಮೋಕ್ಷ ಪಾರಾಯಣ ಮಾಡಬೇಕು.

ಯುಗಾದಿಯಂದು ಪ್ರತಿಯೊಬ್ಬನು ಅಭ್ಯಂಜನ ಮಾಡಲೇಬೇಕು. ಈ ಮೊದಲು ಪೂಜಕನು ಸ್ನಾನ ಮಾಡಿ ಭಗವಂತನಿಗೆ ಎಣ್ಣೆ ಸೀಗೆಪುಡಿ, ಬಿಸಿ ನೀರಿನಿಂದ ಅಭ್ಯಂಜನವನ್ನು ಮಾಡಿಸಬೇಕು. ಭಗವಂತನಿಗೆ ಮಾಡಿ ಉಳಿದ ಎಣ್ಣೆ–ಸೀಗೆಪುಡಿಗೆ ಬೇರೆ ಎಣ್ಣೆ–ಸೀಗೆಪುಡಿಯನ್ನು ಬೆರೆಸಿ ಪ್ರತಿಯೊಬ್ಬರೂ ಹಚ್ಚಿಕೊಂಡು ನಂತರ ಸ್ನಾನ ಮಾಡಬೇಕು.

ಸಪ್ತ ಚಿರಂಜೀವಿ ಸ್ಮರಣೆ : ಎಣ್ಣೆಯನ್ನು ಹಚ್ಚಿಕೊಳ್ಳುವಾಗ ಅಶ್ವತ್ಥಾಮಾದಿ ಸಪ್ತ ಚಿರಂಜೀವಿಗಳನ್ನು ಮಾರ್ಕಂಡೇಯನನ್ನು ಈ ಕೆಳಗೆ ಕೊಟ್ಟಿರುವ ಮಂತ್ರ ಹೇಳಿ ಸ್ಮರಿಸಬೇಕು.

**ಅಶ್ವತ್ಥಾಮಾ ಬಲಿರ್ವ್ಯಾಸ ಹನೂಮಾಂಶ್ಚ ವಿಭೀಷಣ: ।**
**ಕೃಪ: ಪರಶುರಾಮಶ್ಚ ಸಪ್ತೈತೇ ಚಿರಂಜೀವಿನ: ॥**

ಅಭ್ಯಂಜನ ನಂತರ ಭಗವಂತನ ವಿಶೇಷ ಪೂಜೆ ಮಾಡಿ ನಂತರ ಹೊಸ ಬಟ್ಟೆಯನ್ನು ಧರಿಸಿ, ನಿಂಬಕದಳ ಭಕ್ಷಣ (ಬೇವು, ಬೆಲ್ಲ) ಬೆರೆಸಿ ನಂತರ ಈ ಮಂತ್ರ ಪಠಿಸುತ್ತಾ ಬೇವು, ಬೆಲ್ಲವನ್ನು ತಿನ್ನಬೇಕು.

**ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯಚ ।**
**ಸರ್ವಾರಿಷ್ಟ ವಿನಾಶಾಯ ನಿಂಬಕದಳ ಭಕ್ಷಣಮ್ ॥**

ವಜ್ರದಂತೆ ದೃಢವಾದ ಶರೀರ ಸರ್ವಸಂಪತ್ತು ಸರ್ವಾರಿಷ್ಟ ನಾಶಗಳಿಗಾಗಿ ಬೇವು, ಬೆಲ್ಲ ಭಕ್ಷಣೆ ಮಾಡಿ ನಂತರ 'ಪಂಚಾಂಗ ಶ್ರವಣ' ದೊಂದಿಗೆ ಹಬ್ಬ ಆಚರಿಸಬೇಕು.

**ಛಾಯಾ ಭಗವಾನ್**
9980162364



# ಸುಬ್ರಹ್ಮಣ್ಯ - ಚಿಂತನೆ


**ಸುಬ್ರಹ್ಮಣ್ಯ ಕಾರ್ತಿಕೇಯಂ ಪಾರ್ವತೆ ಪ್ರಿಯನಂದನಂ । ಭಕ್ತಾನಾಂ ಸರ್ವಪಾಪಘ್ನಂ ತಂ ಗುಹಂ ಪ್ರಣಮಾಮ್ಯಹಂ ॥**

ಸುಬ್ರಹ್ಮಣ್ಯ ಎಂದರೆ ದೇವತೆಗಳ ಸೇನಾನಿ. ಈ ಪರಿಕಲ್ಪನೆಯ ಅರ್ಥವನ್ನು ಹೀಗೆ ವ್ಯಾಖ್ಯಾನಿಸಬಹುದು. ಸು ಎಂದರೆ ಒಳ್ಳೆಯ, ಬ್ರಹ್ಮ ಎಂದರೆ ಜ್ಞಾನ ಮತ್ತು ಣ ಎಂದರೆ ಆನಂದ, ಒಟ್ಟಿನಲ್ಲಿ ಒಳ್ಳೆಯ ಜ್ಞಾನಾನಂದವನ್ನು ಪ್ರತಿನಿಧಿಸುತ್ತದೆ. ಸುಬ್ರಹ್ಮಣ್ಯನನ್ನು ಬ್ರಾಹ್ಮಣ ಪ್ರಿಯ ಎಂದು ಹೇಳುತ್ತಾರೆ. ಬ್ರಾಹ್ಮಣ ಎಂದರೆ ಬ್ರಹ್ಮಜ್ಞಾನಕ್ಕಾಗಿ ಯತ್ನಿಸುವವರ ಪ್ರಿಯನು ಎಂದರ್ಥ. ಸೇನಾನಿ ಎಂದರೆ ಶತೃಗಳ ವಿರುದ್ಧ ಹೋರಾಡುವವರ ಮುಖ್ಯಸ್ಥ. ನಮಗಿರುವ ಶತೃಗಳೆಂದರೆ ಅರಿಷಡ್ವರ್ಗಗಳೇ (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ತು ಮತ್ಸರ). ಇವುಗಳನ್ನು ಅರಿತಂಥ ಸಂದರ್ಭಗಳಲ್ಲಿ ಇವು ಶತೃಗಳಾಗಿ ಕಾಡುವುದಿಲ್ಲ, ನಮ್ಮ ಹತೋಟಿಯಲ್ಲಿ ಇರುತ್ತವೆ. ಈ ಗುಣಗಳನ್ನು ಭಗವಂತನನ್ನು ಒಲಿಸಿಕೊಳ್ಳಲು ಬಳಸಿದಾಗ ಇವು ಅರಿ (ಶತೃ) ಗಳಾಗಿರದೆ ನಮಗೆ ಮಿತ್ರರಾಗಿರುತ್ತವೆ. ಭಗವಂತನ ಸೃಷ್ಟಿಯಲ್ಲಿ ಇವುಗಳಾವುವೂ ಶತೃಗಳಾಗಲು ಸಾಧ್ಯವಿಲ್ಲ, ಬಳಕೆ ಮಾತ್ರ ನಮ್ಮ ಕೈಲಿರುತ್ತದೆ. ಈ ಅರಿಷಡ್ವರ್ಗವನ್ನು ಸರಿಯಾದ ರೀತಿಯಲ್ಲಿ ಸಂಯಮದಿಂದ ಉಪಯೋಗಿಸುವುದಕ್ಕೆ ಶಾಸ್ತ್ರಗಳೇ ಉಪಾಯ (ಶಾಸನಾತ್ ತ್ರಾಯತೆ ಇತಿ ಶಾಸ್ತ್ರ). ಅದ್ದರಿಂದ ಸುಬ್ರಹ್ಮಣ್ಯನನ್ನು ಷಷ್ಠಿಯಂದು ಆರಾಧಿಸುವ ವಾಡಿಕೆಯೂ ಇದೆ. ತಮಿಳುನಾಡಿನಲ್ಲಿ ಸ್ವಾಮಿಮಲೈ, ತಿರುತ್ತಣಿ, ಪಳನಿ, ಪಳಮುದಿಚೋಲೈ, ತಿರುಚ್ಚಂದೂರ್, ಮತ್ತು ತಿರುಪ್ಪರ ಕುಂಡ್ರಂ ಎಂಬ ಆರು ಕ್ಷೇತ್ರಗಳಲ್ಲಿ ಸುಬ್ರಹ್ಮಣ್ಯನ ದೇವಾಲಯಗಳಿವೆ. ಸುಬ್ರಹ್ಮಣ್ಯನನ್ನು ವಟುರೂಪದಲ್ಲಿ ಪೂಜಿಸಲಾಗುತ್ತದೆ. ತಂದೆ ಪರಮ ಶಿವನಿಗೇ ಬಾಲಸುಬ್ರಹ್ಮಣ್ಯನು ಜ್ಞಾನೋಪದೇಶವನ್ನು ಮಾಡಿದವನು. ಆದ್ದರಿಂದ ಸಕಲ ಚರಾಚರಗಳೂ ಪರಬ್ರಹ್ಮಮಯವೇ ಆಗಿರುವಾಗ ಗುರುರೂಪಿಯಾದ ಗುರುಗುಹ ವಟುವಿನಲ್ಲೂ ಭಗವಂತನ ದರ್ಶನ ಮಾಡುವ ಸಂಪ್ರದಾಯ ನಮ್ಮ ಸಂಸ್ಕೃತಿಯಲ್ಲಿ ಬೆಳೆದು ಬಂದಿದೆ.

ಆದಿ ಗುರುಗಳಾದ ಶ್ರೀ ಶಂಕರಾಚಾರ್ಯರು ತಮ್ಮ ಶ್ರೀ ಬಾಲಸುಬ್ರಹ್ಮಣ್ಯ ಭುಜಂಗ ಸ್ತೋತ್ರದಲ್ಲಿ ಹೀಗೆ ಸ್ತುತಿಸಿದ್ದಾರೆ.

**ಮಯೂರಾಧಿರೂಢಂ ಮಹಾವಾಕ್ಯಗೂಢಂ। ಮನೋಹಾರಿದೇಹಂ**
**ಮಹಚ್ಚಿತ್ತಗೇಹಮ್ ।**
**ಮಹೀದೇವ ದೇವಂ ಮಹಾವೇದಭಾವಂ ಮಹಾದೇವಬಾಲಂ ಭಜೆ**
**ಲೋಕಪಾಲಮ್॥**

ಮಯೂರದ ಅಂದಚೆಂದ, ಅದರ ಗರಿಯ ಸಾವಿರಾರು ಕಣ್ಣಿನಂತಹ ಚಿತ್ತಾರ, ವಿನ್ಯಾಸ, ಬಣ್ಣ ಎಲ್ಲವೂ ಪ್ರಪಂಚದಲ್ಲಿರುವ ಸುಂದರತೆಯನ್ನು ಪ್ರತಿನಿಧಿಸುತ್ತದೆ. ಮಯೂರವು ಮಳೆಯ ನಿರೀಕ್ಷೆಯಲ್ಲಿ ಬೆಟ್ಟದ ತಪ್ಪಲಿನಲ್ಲಿ ಮೋಡ ತುಂಬಿದ ಗಗನ ಇರುವ ಸಮಯದಲ್ಲಿ ಗರಿ ಬಿಚ್ಚಿ ನರ್ತಿಸುತ್ತದೆ. ಇದೇ ರೀತಿ ಮಾನವನು ಸುಖದ ಪ್ರತೀಕ್ಷೆಯಲ್ಲಿ ಅಜ್ಞಾನದಿಂದ ಮುಂದೆ ಬರುವ ಅಲ್ಪ ಮತ್ತು ಅಶಾಶ್ವತ ಆನಂದಕ್ಕಾಗಿ ತನಗೆ ಅನುಕೂಲವಾದ ಫಲವೇ ದೊರೆಯುತ್ತದೆಂದು ಕರ್ಮದಲ್ಲಿ ಮಗ್ನನಾಗುತ್ತಾನೆ. ಇಂತಹ ಮಯೂರವನ್ನು ವಾಹನವನ್ನಾಗಿ ಮಾಡಿಕೊಂಡಿರುವ ಸುಬ್ರಹ್ಮಣ್ಯನು ಅದರ ಮೇಲೆ ಕುಳಿತು ವಿಹರಿಸುತ್ತಾನೆ. ಮಾನವನೂ ಇದೇ ರೀತಿ ಕರ್ಮವನ್ನು ಕ್ರಿಯಾತ್ಮಕವಾಗಿ ಮಾಡುತ್ತಾ, ತಾನು ನಿಮಿತ್ತ ಮಾತ್ರ ಎಂದು ತಿಳಿದು ಆನಂದದಿಂದ ವಿಹರಿಸಬೇಕು. ಮಯೂರದ ಭಾರವಾದ ಗರಿಯೂ ನರ್ತಿಸುವಾಗ ಹಗುರವೆಂದೆನಿಸುತ್ತದೆ. ಇದರಂತೆ ನಾವು ಮಾಡುವ ಕರ್ಮಗಳನ್ನು ಶಾಂತಿ, ಸಮಾಧಾನದಿಂದ ಮಾಡಬೇಕು.



**ಅಪಸ್ಮಾರ**
**ಕುಷ್ಟಕ್ಷಯಾರ್ಶಃ ಪ್ರಮೇಹ ।**
**ಜ್ವರೋನ್ಮಾದ ಗುಲ್ಮಾದಿ**
**ರೋಗಾ ಮಹಾಂತಃ ।**
**ಪಿಶಾಚಾಶ್ಚ ಸರ್ವೇ**
**ಭವತ್ಪತ್ರ ಭೂಅತಿಂ ।**
**ವಿಲೋಕ್ಯ ಕ್ಷಣಾತ್ತಾರಕಾರೇ**
**ದ್ರವಂತೇಃ ॥**

ಸುಬ್ರಹ್ಮಣ್ಯನ ಪವಿತ್ರ ಭಸ್ಮದರ್ಶನ ಮಾತ್ರ ದಿಂದಲೇ ಮಹಾ ರೋಗಗಳು, ಪಿಶಾಚಿ ಗಳು ಕ್ಷಣಮಾತ್ರದಲ್ಲಿ ಓಡಿ ಹೋಗುವುವು ಎಂಬುದು ಶಬ್ದಾರ್ಥ. ಭಸ್ಮ ದರ್ಶನವೆಂದರೆ ನಮ್ಮ ಜಡ ಬರಿಕಣ್ಣಿನಿಂದ ವಿಭೂತಿಯನ್ನು ನೋಡುವುದೆಂದಲ್ಲ. ಬದುಕಿನ ಸಮಯದಲ್ಲೇ ನಮ್ಮ ಭೌತಿಕ ಶರೀರದ ಅಶಾಶ್ವತತೆ ಖಚಿತವಾದರೆ, ಅದಕ್ಕೆ ಮುಂಚಿನ ಜರಾ, ವ್ಯಾಧಿ, ದುಃಖಗಳು ದೋಷವೆನಿಸದೆ ಪ್ರಾರಬ್ಧವಿದ್ದಾಗ ಅನುಭವಿಸಲೇ ಬೇಕು ಎಂದು ನಿಶ್ಚಯವಾದಾಗ ಇವುಗಳು ನಮ್ಮನ್ನು ಬಾಧಿಸುವುದಿಲ್ಲ. ಈ ವಿಚಾರದಿಂದ ನಾನು ಶರೀರವಲ್ಲ, ಚೈತನ್ಯ ಎಂದು ಅರಿವು ಗಟ್ಟಿಯಾಗುತ್ತದೆ. ನಮಗಿರುವ ಪ್ರಪಂಚದಲ್ಲಿನ ಭಯ, ಬಯಕೆ ಇಲ್ಲವಾದಾಗ 'ಪುನರ್ಜನ್ಮ ನ ವಿದ್ಯತೆ' ಎನ್ನುವಂತೆ ಪುನರ್ಜನ್ಮದಿಂದ ಮತ್ತೆ ಬಂದು ಪ್ರಪಂಚದ ವಿಷಯವನ್ನು ತಿಳಿಯಬೇಕಾದದ್ದಿಲ್ಲ.

**ನಮಃ ಕೇಕಿನೇ ಶಕ್ತಯೇ ಚಾಪಿ ತುಭ್ಯಂ । ನಮಶ್ಛಾಗ ತುಭ್ಯಂ ನಮಃ ಕುಕ್ಕುಟಾಯ।**

**ನಮಃ ಸಿಂಧವೇ ಸಿಂಧುದೇಶಾಯ ತುಭ್ಯಂ । ಪುನಃ ಸ್ಕಂಧಮೂರ್ತೇ ನಮಸ್ತೇ ನಮೋಸ್ತು ॥**

ಇಲ್ಲಿ ಸುಬ್ರಹ್ಮಣ್ಯನ ಬಳಿ ಇರುವ ಕುಕ್ಕುಟ ಎಂದರೆ ಕೋಳಿಗೆ ನಮಸ್ಕಾರಗಳನ್ನು ತಿಳಿಸಿದ್ದಾರೆ. ಕೋಳಿಯು ನಮ್ಮನ್ನು ಬೆಳಿಗ್ಗೆ ಕೂಗಿ ಎಚ್ಚರಿಸುವ ಜೀವಿ. ಇದೇ ರೀತಿ ವೇದರೂಪಿಯಾದ ಸುಬ್ರಹ್ಮಣ್ಯನು ನಮ್ಮನ್ನು ಅಜ್ಞಾನದಿಂದ ಎಚ್ಚರಿಸಿ ಜ್ಞಾನದತ್ತ ಕೊಂಡೊಯ್ಯುತ್ತಾನೆ. ಸ್ಕಂದ ಎಂಬ ನಾಮಕ್ಕೆ ಮಧ್ಯಭಾಗ ಎಂಬ ಅರ್ಥ ಇದೆ. ದೇವತೆ, ಅಸುರರ ನಡುವೆ ಮನುಷ್ಯ ಜನ್ಮ ಇದೆ. ಶೈಶವ, ವೃದ್ಧಾಪ್ಯದ ನಡುವೆ ಯೌವ್ವನ ಸ್ಥಿತಿ ಇದೆ. ನಿದ್ದೆ, ಸ್ವಪ್ನದ ನಡುವಿನದು ಎಚ್ಚರದ ಸ್ಥಿತಿ. ಭೂತ, ಭವಿಷ್ಯದ ನಡುವಿನಲ್ಲಿ ವರ್ತಮಾನ ಇದೆ. ಮಾನವನಾದವನು ಯೌವ್ವನವೆಂಬ ಸುಸ್ಥಿತಿಯಲ್ಲಿರುವಾಗಲೇ ಎಚ್ಚರದಿಂದ ವರ್ತಮಾನದಲ್ಲೇ ಭಗವಂತನ ಸ್ಮರಣೆ, ಅರ್ಚನೆ, ಯಜ್ಞ, ಪೂಜೆಗಳಲ್ಲಿ ತೊಡಗಿಸಿಕೊಂಡಾಗ ಸಕಲ ದೋಷಗಳೂ ಹತ್ತಿಯ ರಾಶಿಗೆ ಒಂದು ಕಿಡಿ ಅನಲವು ತಗುಲಿ ಬೂದಿ ಯಾಗುವಂತೆ ನಮ್ಮ ಸಂಕಷ್ಟಗಳು ನಿವಾರಣೆಯಾಗುತ್ತದೆ.



✍ ಲಲಿತಾ ರಮೇಶ
9945199637

# MEMBERS CONTRIBUTION

| | |
|---|---|
| NIRMALA SUDHINDRA | 500.00 |
| B S SURYANARAYAN | 1,000.00 |
| LAKSHMINARAYAN K R | 2,000.00 |
| UMESH S | 3,000.00 |

**Amount received towards Membership**

| | |
|---|---|
| VEENA ARAVIND | 1,000.00 |
| BHARGAV KASHYAP | 5,000.00 |

**Amount received towards Nagaradhane**

| | |
|---|---|
| KRISHNAMURTHY S N | 50.00 |
| MANJUNATH BHAT | 50.00 |
| RAVI PRAKASH | 100.00 |
| VENUGOPAL | 100.00 |
| INDIRAMMA R S | 100.00 |
| PARVATHI RADHAKRISHNA | 100.00 |
| NAGARAJ | 100.00 |
| SUBBANNA BHAT | 100.00 |
| NARASIMHAN | 100.00 |
| LAKSHMI DEVI | 100.00 |
| RAMA NARASIMHA | 100.00 |
| VENKATESH SRINIVAS | 100.00 |
| NANJUNDA RAO | 100.00 |
| NAGAMANI RAMAPRASAD | 100.00 |
| VEENA BHAI | 100.00 |
| VASU | 100.00 |
| RAJALAKSHMI R K | 100.00 |
| SUBRAMANYA K G | 101.00 |
| VANAJAKSHAMMA THYGARAJAN | 101.00 |
| GIRIJA | 101.00 |
| SHIVRAMACHANDRA | 101.00 |
| NAGARAJ | 101.00 |
| T N RAVINDRA RAM | 101.00 |
| GAYATHRI DATTA | 101.00 |
| GAYATHRI R K | 101.00 |
| LAKSHMI R K | 101.00 |
| SUMITHRAMMA R K | 101.00 |
| VENKATESH R K | 101.00 |
| MANJUNATH R N | 200.00 |
| ANURADHA | 200.00 |
| VIMALA | 200.00 |
| SRINIVASA MURTHY S | 200.00 |
| VENKATESH H V | 200.00 |
| GOVIND RAO | 200.00 |
| SHANTHA K L | 200.00 |
| SRIKANTA SHARMA | 200.00 |
| SURYANARAYANA T P | 200.00 |
| PADMASHREE | 201.00 |
| R N KUMAR | 201.00 |
| RAMAKRISHNA G | 250.00 |
| SREENIVAS A V | 300.00 |
| SAVITHRAMMA R | 300.00 |
| VIJAY KUMAR M R | 400.00 |
| VIMALA | 500.00 |
| SRIKANTH R A | 500.00 |
| N V SUNDER | 500.00 |
| PANKAJA MURTHY | 500.00 |
| SHANTA LAKSHMINARAYAN | 500.00 |
| MANJULA GOPALASWAMY | 500.00 |
| MANI T S | 500.00 |
| PRABHA NAGARAJ | 500.00 |
| SESHACHALA B | 500.00 |
| VENKATASUBBIAH K | 500.00 |
| SRIKANTIAH M S | 500.00 |
| LAKSHMINARAYAN K R | 500.00 |
| JAGANATH T P | 500.00 |
| SHANKAR S | 500.00 |
| BHAGYA N SHARATH G | 500.00 |
| D V NAGARAJ KULKARNI | 500.00 |
| SATHYANARAYANA B L | 500.00 |
| HAMSA & PRASANNA | 500.00 |
| MURALI A | 500.00 |
| SHESHAGIRI SHAKAMBARI | 500.00 |
| MANJUNATH A V | 500.00 |
| NARAYAN SWAMY K S | 500.00 |
| EASHWARAN A | 500.00 |
| ANANTH H G | 500.00 |
| ANJAN KUMAR | 500.00 |
| COL V G RAJAN | 500.00 |
| G V CHAYAPATHY | 500.00 |
| S V NARAYANA MURTHY SARJAPURA | 500.00 |
| S R LATHA | 501.00 |
| SARASWATHI K | 501.00 |
| NAGARAJA RAO | 501.00 |
| RAGHAVENDRA | 501.00 |
| PARVATHI R K | 501.00 |
| NAGARATHNA R K | 501.00 |
| PRABHAKAR KAMANAHALLI | 501.00 |
| VENKATESH G S | 510.00 |
| RUKMINI SHIVRAMAN | 600.00 |
| RAMADEVI & SISTERS | 650.00 |
| INDIRAMMA R S | 660.00 |
| K RAMADEVI | 700.00 |
| HUNDI SALES 36 NOS | 720.00 |
| K S ASWATHANARAYAN RAO | 1,000.00 |
| B V SESHADRI | 1,000.00 |
| AMBA NADAVATHI | 1,000.00 |
| GAYATHRI RAJAPUR | 1,000.00 |
| CHANDRASHEKARIAH N | 1,000.00 |
| SANDHYA NAGARAJ | 1,000.00 |
| KRISHNAN T S | 1,000.00 |
| DHATRI PRASAD | 1,000.00 |
| RAHUL SREENIVASA | 1,000.00 |
| SREENIVAS K G | 1,000.00 |
| SWAMINATHAN R N | 1,000.00 |
| UMA GOVIND | 1,000.00 |
| ARVIND RAJAPUR | 1,000.00 |
| SUVARNA R P | 1,000.00 |
| M R JAYARAM | 1,000.00 |
| L VENKATESH | 1,000.00 |
| SUDHA SHANKAR | 1,000.00 |
| VENKATASUBBA RAO R N | 1,000.00 |
| PARVATHI VIJAYASARATHI | 1,000.00 |
| SRINIVAS K S | 1,000.00 |
| SHIVAKUMAR | 1,000.00 |
| JAYARAM | 1,000.00 |
| SHREESHA | 1,000.00 |
| SHARVARI SREENIVAS | 1,000.00 |
| D M HARISH/K T NAGARAJ | 1,001.00 |
| SAVITHRI PARATHASARATHI | 1,001.00 |
| ARUN VENKATACHALAIAH | 1,500.00 |
| SEETHURAM K G | 1,500.00 |
| RAGHUNATH EASHWARAN | 1,500.00 |

| | |
|---|---|
| VISHWANATH A V | 1,500.00 |
| M. ANANTHARAM | 1,500.00 |
| PRATHIBHA JAYARAM | 1,500.00 |
| LATE DHANAPPA & AMMAYAMMA SONS | 1,500.00 |
| SUBBALAKSHMI | 1,500.00 |
| PRABHAKAR NATARAJAN | 2,000.00 |
| SAVITHRI R S VENKATARAMIAH | 2,000.00 |
| LAKSHMIDEVI G P | 2,000.00 |
| SRINIVASAN S MATHIKERE | 2,000.00 |
| RAVISHANKAR S | 2,000.00 |
| MOHAN | 2,000.00 |
| SRI HARI UDUPA | 2,000.00 |
| HEMAVATHI & FAMILY | 2,000.00 |
| SUBRAMANYAM A M | 2,002.00 |
| SHARDAMMA B N | 2,500.00 |
| GOPALAKRISHNA R | 2,500.00 |
| RAMAMURTHY B C | 3,000.00 |
| T G SATHYANARAYAN SONS & GRAND SONS | 3,000.00 |
| B V PADMA | 5,000.00 |
| UMESH S | 5,000.00 |
| R S PADMANABHAN | 5,000.00 |
| GAYATHRI DEVI M | 5,000.00 |
| SJP FRIENDS (COL V G RAJAN) | 6,001.00 |
| B V JAYARAM | 10,000.00 |
| SHAMALA SWAMY | 10,000.00 |

**Amount received towards Vidyanidhi**

| | |
|---|---|
| VENUGOPAL G S | 500.00 |

**Amount received towards A M F**

| | |
|---|---|
| SESHACHALA B | 500.00 |
| ARUN VENKATACHALAIAH | 500.00 |
| VIJAYLAKSHMI | 500.00 |
| DILEEP KUMAR R | 500.00 |
| NATARAJAN K C | 500.00 |
| SARASWATHI NATARAJAN | 500.00 |
| SHUBHA GAYATHRI | 500.00 |
| SHIVAKUMAR N | 500.00 |
| MAMATHA SHIVAKUMAR | 500.00 |
| BRAMARA GOPINATH | 500.00 |
| GOPINATH R V | 500.00 |
| SEETHURAM K G | 500.00 |
| RAGHUNATH EASHWARAN | 500.00 |
| VIJAYDEV S | 500.00 |
| UMESH S | 500.00 |
| SRIKANTIAH M S | 500.00 |
| GUNDAPPA K | 500.00 |
| LEELAVATHI G | 500.00 |
| GURUPRASANNA G | 500.00 |
| SREENIVAS K G | 500.00 |
| BALASUBRAMANI SREENIVAS | 500.00 |
| LAKSHMINARAYAN K R | 500.00 |
| GOPALAKRISHNA R | 500.00 |
| PARIMALA S C | 500.00 |
| SUMAN G KRISHNA | 500.00 |
| VIJAYKUMAR S R | 500.00 |
| UMA GOVIND | 500.00 |
| SRINIVASAN S MATHIKERE | 500.00 |
| BALASUBRAMANYA S R | 500.00 |
| VISHWANATH A V | 500.00 |
| VENKATESH R S | 500.00 |
| CHAMPAKA T S | 500.00 |
| SHANKAR S | 500.00 |
| R P RAVISHANKAR | 500.00 |
| BHAGYA N SHARATH G | 500.00 |
| SRIDHAR B | 500.00 |
| SUNANDA MOHAN | 500.00 |
| M R JAYARAM | 500.00 |
| SATHYANARAYANA B L | 500.00 |
| RAVINDRA A R | 500.00 |
| RAVISHANKAR R C | 500.00 |
| L VENKATESH | 500.00 |
| VENKATESH PRASAD R | 500.00 |
| ASHOK KUMAR G | 500.00 |
| DR SWAMINATHA | 500.00 |
| D S GOVINDRAJ | 500.00 |
| BELLAVE NAGARAJ | 500.00 |
| ASWATH RAJA RAO | 500.00 |
| SURYAPRAKASH B A | 500.00 |
| SATEESHA B S | 500.00 |
| VENKATESH A | 500.00 |
| MANJUNATH K | 500.00 |
| CHANDRASHEKAR K | 500.00 |
| VAIDYANATH A S | 500.00 |
| RAVISHANKAR S | 500.00 |
| SRINATH L | 500.00 |
| SRINIVAS K S | 500.00 |
| MANJUNATH A V | 500.00 |
| NARAYAN SWAMY K S | 500.00 |
| EASHWARAN A | 500.00 |
| VENKATESH C | 500.00 |
| KUMAR C | 500.00 |
| ANANTH H G | 500.00 |
| ANANTHA K S | 500.00 |
| SATHYAMURTHY D | 500.00 |
| VENUGOPAL G S | 500.00 |
| ANJAN KUMAR | 500.00 |
| SUBBALAKSHMI | 500.00 |
| R S RAMESH | 500.00 |
| BADARINARAYAN H R | 500.00 |
| LAKSHMANA SHARMA B A | 500.00 |
| NARASU RAMACHANDRA | 500.00 |
| SADANAND H K | 500.00 |
| CHETAN H K | 500.00 |
| YOGESH B E | 500.00 |
| COL V G RAJAN | 1,000.00 |
| V. SRIDHAR B & PRADEEP S | 1,500.00 |

**Hundi Collections**

| | |
|---|---|
| NAGARAJ | 279.00 |
| KRISHNA SESHAGIRI | 343.00 |
| SUBBA RAO A R | 358.00 |
| LALITHA MURTHY S | 535.00 |
| R RAMESH | 608.00 |
| CHIDAMBARA | 638.00 |
| BHAGYA NAGARAJ | 713.00 |
| VISHWESH M R | 1,053.00 |
| TARA RAVEENDRA | 1,120.00 |
| ASHOK KUMAR G | 1,200.00 |
| DR SWAMINATHAN | 1,413.00 |
| ANITHA KRISHNAMURTHY | 1,702.00 |
| PRADEEP S | 2,182.00 |
| VITTAL DAS KAMATH | 2,912.00 |

**Amount received towards Calender**

| | |
|---|---|
| UMESH S | 500.00 |
| SRIDHAR B | 500.00 |

# ಶುಭ ವಿವಾಹ

ಸಂಘದ ಹಿರಿಯ ಸದಸ್ಯ ದಿ. ಬಿ.ಎಸ್. ರಾಧಾಕೃಷ್ಣರವರ ಮೊಮ್ಮಗ, ಶ್ರೀಮತಿ ಎನ್. ರಾಜಲಕ್ಷ್ಮಿ ಮತ್ತು ಶ್ರೀ ಬಿ.ಆರ್. ಪ್ರಭುರವರ ಪುತ್ರ ಚಿ.ಬಿ.ಪಿ. ಶ್ರೇಯಸ್‌ರವರ ವಿವಾಹವು ಶ್ರೀಮತಿ ಅನುರಾಧಾ ವೆಂಕಟೇಶ್ ಮತ್ತು ಶ್ರೀ ವೆಂಕಟೇಶ್‌ರವರ ಪುತ್ರಿ ಚಿ. ಅರ್ಚನಾ ವೆಂಕಟೇಶ್‌ರವರೊಂದಿಗೆ ದಿ. 5.2.2018ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಸಂಘದ ಸದಸ್ಯ ಶ್ರೀ ದಕ್ಷಿಣಾಮೂರ್ತಿ (ಕೆ. ಗೋವಿಂದ್)ರ ಸೋದರಳಿಯ ಚಿ. ಕೌಶಿಕ್ (ಶ್ರೀಮತಿ ಹೇಮಲತಾ ಹಾಗೂ ಶ್ರೀ ರಘುವೀರ್ ರವರ ಪುತ್ರ) ಚಿ.ಸೌ. ದೀಪ್ತಿಯೊಂದಿಗೆ ದಿನಾಂಕ 8.3.2018 ರಂದು ಬೆಂಗಳೂರಿನಲ್ಲಿ ನೆರವೇರಿತು.

ವಿವಾಹಿತರಿಗೆ ಸಂಘ ಶುಭ ಹಾರೈಸುತ್ತದೆ.

# ನಮ್ಮನ್ನಗಲಿದವರು

**ಶ್ರೀ ಕೆ. ರಾಜಗೋಪಾಲ್,** 5.2.2018ರಂದು ಸಂಘದ ಸದಸ್ಯ ಸುರೇಶ್‌ರವರ ಭಾವಮೈದುನ ನಿಧನರಾಗಿದ್ದಾರೆ.

**ಡಾ. ಬೀನಾ ವಾಸನ್** (59) ಸದಸ್ಯ ಡಾ. ಎಸ್.ಎಸ್. ವಾಸನ್‌ರವರ ಪತ್ನಿ

**ಸರಸ್ವತಮ್ಮ** (80) 17.2.2018 ಸದಸ್ಯ ಎ.ವಿ. ರಾಮಸ್ವಾಮಿ ಯವರ ತಾಯಿ.

**ಚಂದ್ರಿಕಾ ವೆಂಕಟರಾಮ್** 16.2.2018, ಸಂಘದ ಸದಸ್ಯ ಶ್ರೀ ನಾಗರಾಜ್ ಸುಬ್ಬರಾವ್‌ರವರ ಅತ್ತಿಗೆ.

**ಬಿ.ಎಸ್. ರಾಧಾಕೃಷ್ಣ** (89) 18.2.2018,

**ಪಾರ್ಥಸಾರಥಿ,** 29.1.2018 **ವಿಮಲ ನಾಗೇಂದ್ರ** 21.2.2018

**ವಿಮಲಾ ಅನಂತರಾಮ್** (70) 15.03.2018ರಂದು ಸಮುದಾಯದ ಹಿರಿಯ ಚೇತನರಾದ ಹೆಡ್‌ಮಾಸ್ಟರ್ ಕೃಷ್ಣಮೂರ್ತಿಯವರ ಸೊಸೆ ಹಾಗೂ ಶ್ರೀಕಂಠೇಶ್ವರಯ್ಯರ್‌ರವರು ಮಗಳು. ಸದಸ್ಯರಾದ ಶ್ರೀ ಶ್ಯಾಮ್ ಮತ್ತು ಶ್ರೀಕಾಂತ್‌ರವರ ತಾಯಿ.

**ಇಂದಿರಮ್ಮ** (76) 17.3.2018 ಸದಸ್ಯ ಶ್ರೀ ಕೆ.ಎನ್. ಬಾಲಾಜಿಯವರ ತಾಯಿ.



ಸಂಘದ ಮಹಾ ಪೋಷಕ, ಮಹಾ ದಾನಿಗಳಾದ ಬಿ.ಎಸ್. ಕೃಷ್ಣಮೂರ್ತಿ (84) ಬಿನ್ನಮಂಗಲದ ಸುಬ್ಬರಾಯಪ್ಪ ಮತ್ತು ಸುಬ್ಬಮ್ಮರವರ ಪುತ್ರ – ಪೋಷಕ ಬಿ.ಎಸ್. ಸೂರ್ಯನಾರಾಯಣ್‌ರವರ ಸಹೋದರ ಇವರು 16.2.2018ರಂದು ದೈವಾಧೀನರಾದರು.

### ಸಂಘದ ಹೊಸ ಸದಸ್ಯರಿಗೆ ಸ್ವಾಗತ

| | |
|---|---|
| ಶಾರ್ವರಿ ಶ್ರೀನಿವಾಸನ್ | ಕೆ. ರಾಮಮೂರ್ತಿ |
| ಡಾ. ಭಾರ್ಗವ ಕಶ್ಯಪ್ | ವೀಣಾ ಅರವಿಂದ್ |

### ಸಂಘಕ್ಕೆ ದೇಣಿಗೆ ನೀಡಿರುವ ದಾನಿಗಳು

| | |
|---|---|
| ಶ್ಯಾಮಲಾ ಕುಮಾರಿ | 10,000/– |
| ಬಿ.ವಿ. ಜಯರಾಂ | 10,000/– |
| ಆರ್.ಎಸ್. ಪದ್ಮನಾಭನ್ | 5,000/– |
| ಗಾಯತ್ರಿ | 5,000/– |
| ಬಿ.ವಿ. ಪದ್ಮ | 5,000/– |

# ಬ್ರಾಹ್ಮಣ ಮಹಾಸಭಾದ ವಿಪ್ರ ಬೃಹತ್ ಸಮಾವೇಶ 2018



ಬೃಹಚ್ಚರಣ ಸಂಘವು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭೆಯ ಅಂಗಸಂಸ್ಥೆಯಾಗಿದ್ದು ದಿ. 24.2.2018, 25.2.2018ರಂದು ನಡೆದ ಬೆಂಗಳೂರು ಮಹಾನಗರ ವಿಪ್ರರ ಬೃಹತ್ ಸಮಾವೇಶದಲ್ಲಿ ಸಂಘದ ಸದಸ್ಯರು ಭಾಗವಹಿಸಿದ್ದಲ್ಲದೆ 25.2.2018ರಂದು ನಡೆದ ಗಾಯತ್ರಿ ರಥೋತ್ಸವದ ಶೋಭಾಯಾತ್ರೆಯಲ್ಲಿ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಕಾರ್ಯಕಾರಿ ಸಮಿತಿಯ ಒಪ್ಪಿಗೆಯ ಮೇರೆಗೆ ಬೃಹಚ್ಚರಣ ಸಂಘದ ವತಿಯಿಂದ ರೂ. 10,000/–ಗಳನ್ನು ಬ್ರಾಹ್ಮಣ ಮಹಾ ಸಭೆಗೆ ನೀಡಲಾಯಿತು. (ರಸೀತಿ ಸಂಖ್ಯೆ 374, ದಿ. 20.2.2018)

ಯಾವುದೇ ನೆರವಿಲ್ಲದೆ ಸಾವಿರಾರು ಬ್ರಾಹ್ಮಣ ಬಂಧುಗಳನ್ನು ಒಂದೆಡೆ ಒಗ್ಗೂಡಿಸುವುದು ಕಷ್ಟ ಸಾಧ್ಯ. ಇಂತಹ ಮಹತ್ಕಾರ್ಯ ನಡೆಸಿದ ಮಹಾಸಭೆಯ ಅಧ್ಯಕ್ಷರಾದ ಶ್ರೀ ಕೆ.ಎನ್. ವೆಂಕಟನಾರಾಯಣ ಹಾಗೂ ಕಾರ್ಯನಿರ್ವಾಹಕ ಸಮಿತಿಗೆ ಬೃಹಚ್ಚರಣ ಸಂಘದ ಹೃತ್ಪೂರ್ವಕ ವಂದನೆಗಳು. ಮಹಾಸಭೆಯು ತೆಗೆದುಕೊಳ್ಳುವ ಎಲ್ಲಾ ನಿರ್ಣಯಗಳಿಗೆ ಬೃಹಚ್ಚರಣ ಸಂಘವು ಪೂರ್ಣವಾಗಿ ಸಹಕಾರ ನೀಡಲಿದೆ.



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರು. ಬೃಹಚ್ಚರಣ ಸಮುದಾಯದ ಹಿತೈಷಿಗಳು ಹಾಗೂ ಶ್ರೀ ರಾಘವೇಂದ್ರ ಬ್ಯಾಂಕ್ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ಅವರಿಗೆ UNOರವರ Indian Virtual University for Peace & Education'ರವರಿಂದ Social Service in Co-operative ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ನೀಡಲಾಗಿದೆ. ಈ ಸಂದರ್ಭದಲ್ಲಿ ಶ್ರೀಯುತರಿಗೆ ಬೃಹಚ್ಚರಣ ಸಂಘವು ಶುಭ ಹಾರೈಸುತ್ತದೆ.

# ಚೂಡಸಂದ್ರದ ಆಂಜನೇಯಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ



ಬೃಹಚ್ಚರಣ ಸಮುದಾಯದವರು ಕಾರಣಾಂತರಗಳಿಂದ ತಮಿಳು ನಾಡಿನ ಮಂಜಪತ್ತೂರಿನಿಂದ ಹೊಸೂರು, ಡೆಂಕಣಿಕೋಟೆ, ಥಳಿ, ಚೂಡಸಂದ್ರ ಮುಂತಾದ ಗ್ರಾಮಗಳಲ್ಲಿ ಬಂದು ನೆಲೆಸಿದ್ದರು ಎಂಬ ಐತಿಹ್ಯವಿದೆ.

ಹೊಸೂರು ಮತ್ತು ಡೆಂಕಣಿಕೋಟೆಯ ಹತ್ತಿರವಿರುವ ಥಳಿಯಿಂದ ಸುಮಾರು 5 ಕಿ.ಮೀ. ದೂರದಲ್ಲಿ ಚೂಡಸಂದ್ರ ಗ್ರಾಮವಿದೆ. ಅಲ್ಲಿ ನೂರಾರು ವರ್ಷ ಹಳೆಯದಾದ ಆಂಜನೇಯ ದೇವಸ್ಥಾನವು ಶಿಥಿಲ ಸ್ಥಿತಿಯಲ್ಲಿದ್ದು, ಅದನ್ನು ನಮ್ಮ ತಾತಂದಿರಾದ ದಿ. ಸುಬ್ಬರಾವ್‌ರವರ ತಮ್ಮ ದಿ. ಶಂಕರ ಅಯ್ಯರ್‌ರವರ ಮೊಮ್ಮಕ್ಕಳು, ಮರಿಮಕ್ಕಳು ಧನ ಸಹಾಯ ನೀಡಿ ಈ ದೇವಸ್ಥಾನವನ್ನು ಬೃಹಚ್ಚರಣ ಸಂಘದ ಪೋಷಕರೂ, ನಮ್ಮ ಕುಟುಂಬದ ಹಿರಿಯರಾದ ಖ್ಯಾತ ಚಲನಚಿತ್ರ ದಿಗ್ಗಜ ಶ್ರೀ ಶಿವರಾಂರವರ ನೇತೃತ್ವದಲ್ಲಿ ಜೀರ್ಣೋದ್ಧಾರ ನವೀಕರಣಗೊಂಡಿದೆ.

ಚೂಡಸಂದ್ರ ಗ್ರಾಮಸ್ಥರೊಂದಿಗೆ ಕಲಾವಿದ ಶ್ರೀ ಸರಿಗಮ ವಿಜಿ, ಶ್ರೀ ವೇಣುಗೋಪಾಲ್, ಶ್ರೀ ಸಜ್ಜನರಾವ್ ಹಾಗೂ ಇತರರ ದೇಣಿಗೆಯಿಂದ ಈ ದೇವಸ್ಥಾನಕ್ಕೆ ಮಹಾಗೋಪುರವನ್ನು ಕಟ್ಟಿಸಿದ್ದಾರೆ. ಅದರ ಜೀರ್ಣೋದ್ಧಾರ ಹಾಗೂ ಮಹಾಗೋಪುರದ ಕುಂಭಾಭಿಷೇಕವನ್ನು ಇದೇ ತಿಂಗಳು ದಿನಾಂಕ 5.2.2018ರ ಸೋಮವಾರ ಬಹಳ ಅದ್ಧೂರಿಯಾಗಿ ನೆರವೇರಿಸಲಾಯಿತು. ನಮ್ಮ ಗ್ರಾಮದವರಾದ ವೇ.ಬ್ರ.ಶ್ರೀ ರಾಮಸ್ವಾಮಿ ಹಾಗೂ ವೇ.ಬ್ರ. ಶ್ರೀ ವೆಂಕಟೇಶ ಶಾಸ್ತ್ರಿಗಳ ಮಕ್ಕಳು ಈ ದೇವತಾ ಕಾರ್ಯಕ್ರಮಗಳನ್ನು ಒಪ್ಪಿಕೊಂಡು ಬಹಳ ಅದ್ಧೂರಿಯಾಗಿ ನೆರವೇರಿಸಿದರು. ಎಲ್ಲಾ ಚೂಡಸಂದ್ರದ ಗ್ರಾಮಸ್ಥರು ಮತ್ತು ನಮ್ಮ ವಂಶದವರೆಲ್ಲಾ ಈ ಕಾರ್ಯಕ್ರಮವನ್ನು ವೀಕ್ಷಿಸಿದರು ಮತ್ತು ಬಹಳಷ್ಟು ಮಂದಿ ಕೊಂಡಾಡಿದರು. ಅಂದು ಗ್ರಾಮಸ್ಥರಿಗೆಲ್ಲಾ ಭೋಜನವನ್ನು ಏರ್ಪಡಿಸಲಾಗಿತ್ತು.

ಆ ದೇವಸ್ಥಾನದಲ್ಲಿ ದಿ. 5.2.2018ರಿಂದ 48 ದಿನಗಳ ಮಂಡಲ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ. ಸಮುದಾಯದ ಭಕ್ತಾದಿಗಳು ಅಲ್ಲಿಗೆ ಹೋಗಿ ಆ ಪೂಜಾ ಕೈಂಕರ್ಯದಲ್ಲಿ ಭಾಗವಹಿಸಬಹುದು.



✍ ಕೆ. ಗುಂಡಪ್ಪ
9845332315

# ಮಕ್ಕಳಿಗಾಗಿ ಲೆಕ್ಕಗಳು

1) ಶಾಮರಾಯರು 10 ಲಕ್ಷ ರೂಪಾಯಿಗಳನ್ನು 2 ವರ್ಷಕ್ಕೆ 10% ಚಕ್ರ ಬಡ್ಡಿಯಂತೆ (ವಾರ್ಷಿಕ) 'ರಾಮ' ಬ್ಯಾಂಕಿನಲ್ಲಿ ಠೇವಣಿ ಇಟ್ಟರು. ಮತ್ತೊಂದು 10 ಲಕ್ಷ ರೂಪಾಯಿಗಳನ್ನು 'ಭೀಮ' ಬ್ಯಾಂಕಿನಲ್ಲಿ 2 ವರ್ಷಕ್ಕೆ 11% ಸರಳ ಬಡ್ಡಿಯಂತೆ ಠೇವಣಿ ಇಟ್ಟರು. 2 ವರ್ಷಗಳ ನಂತರ ಅವರಿಗೆ ಯಾವ ಬ್ಯಾಂಕಿನಿಂದ ಹೆಚ್ಚು ಹಣ ದೊರೆಯುತ್ತದೆ ? ಹೆಚ್ಚುವರಿಯಾಗಿ ದೊರೆಯುವ ಆ ಹಣದ ಮೊತ್ತ ಎಷ್ಟು ?
2) ಒಂದು ಪಾರ್ಕಿನಲ್ಲಿ ಕೆಲವು ಮರಗಳಿವೆ. ಕೆಲವು ಹಕ್ಕಿಗಳು ಅಲ್ಲಿಗೆ ಹಾರಿ ಬರುತ್ತವೆ. ಪ್ರತಿ ಮರದ ಮೇಲೆ ಒಂದು ಹಕ್ಕಿ ಕುಳಿತು ಕೊಂಡರೆ ಒಂದು ಹಕ್ಕಿ ಉಳಿಯುತ್ತದೆ. ಪ್ರತಿ ಮರದ ಮೇಲೆ ಎರಡು ಹಕ್ಕಿಯಂತೆ ಕುಳಿತುಕೊಂಡರೆ, ಒಂದು ಮರ ಉಳಿದುಕೊಳ್ಳುತ್ತದೆ. ಹಾಗಿದ್ದರೆ, ಅಲ್ಲಿರುವ ಮರಗಳ ಸಂಖ್ಯೆ ಮತ್ತು ಹಕ್ಕಿಗಳ ಸಂಖ್ಯೆ ಕಂಡುಹಿಡಿಯಿರಿ.
3) 1 ರಿಂದ 9 ರವರೆಗಿನ ಸಂಖ್ಯೆಗಳನ್ನು ಉಪಯೋಗಿಸಿಕೊಂಡು ಉತ್ತರವಾಗಿ '1001'ನ್ನು ಹೇಗೆ ಪಡೆಯಯವಿರಿ ?
(ನೀವು ಕೂಡುವುದು, ಕಳೆಯುವುದು, ಗುಣಾಕಾರ, ಭಾಗಾಕಾರಗಳನ್ನು ಮಾಡಬಹುದು ಮತ್ತು ಸಂಖ್ಯೆಗಳನ್ನು ಪಕ್ಕಪಕ್ಕದಲ್ಲಿ ಬರೆದುಕೊಳ್ಳಬಹುದು – ಉದಾ : 48, 135 )
4) 20 ವರ್ಷಗಳ ಹಿಂದೆ ಒಬ್ಬ ತಂದೆಯ ವಯಸ್ಸು ಅವನ ಮಗನ ವಯಸ್ಸಿಗಿಂತ ನಾಲ್ಕರಷ್ಟಿತ್ತು. ಈಗ ತಂದೆಯ ವಯಸ್ಸು ಮಗನ ವಯಸ್ಸಿನ ಎರಡರಷ್ಟು ಇದ್ದರೆ, ತಂದೆ ಮತ್ತು ಮಗನ ಈಗಿನ ವಯಸ್ಸನ್ನು ಕಂಡುಹಿಡಿಯಿರಿ.
5) ಒಂದು ಬಸ್ಸು ಬೆಂಗಳೂರಿನಿಂದ ಮೈಸೂರಿಗೆ ಹೊರಡುತ್ತದೆ. 52 ಜನ ಪ್ರಯಾಣಿಸಬಹುದಾದ ಆ ಬಸ್ಸು ಹೊರಡುವಾಗ ಅರ್ಧ ಭಾಗ ತುಂಬಿರುತ್ತದೆ. ರಾಮನಗರದಲ್ಲಿ ಬಸ್ಸು ನಿಂತಾಗ ಏಳು ಜನರು ಇಳಿದು ಕೆಲವರು ಹತ್ತುತ್ತಾರೆ. ಆಗ ಬಸ್ಸು ಮುಕ್ಕಾಲು ಭಾಗದಷ್ಟು ತುಂಬುತ್ತದೆ. ಮುಂದೆ ಬಸ್ಸು ಚನ್ನಪಟ್ಟಣದಲ್ಲಿ ನಿಂತಾಗ ರಾಮನಗರದಲ್ಲಿ ಹತ್ತಿದಷ್ಟು ಜನರಲ್ಲಿ ಕಾಲುಭಾಗದಷ್ಟು ಜನರು ಇಳಿಯುತ್ತಾರೆ. ಮುಂದೆ ಮಂಡ್ಯದಲ್ಲಿ, ರಾಮನಗರದಲ್ಲಿ ಇಳಿದಷ್ಟು ಜನರ ಎರಡರಷ್ಟು ಜನರು ಹತ್ತುತ್ತಾರೆ ಮತ್ತು ನಾಲ್ಕು ಜನರು ಇಳಿಯುತ್ತಾರೆ. ಹಾಗಾದರೆ ಬಸ್ಸು ಮೈಸೂರಿಗೆ ಬಂದು ಸೇರಿದಾಗ ಅದರಲ್ಲಿ ಎಷ್ಟು ಸೀಟು ಖಾಲಿ ಉಳಿದಿರುತ್ತದೆ ?

**ಸರಿ ಉತ್ತರಗಳು**

1) ಭೀಮ ಬ್ಯಾಂಕಿನಲ್ಲಿ 10,000 ರೂ.ಗಳಷ್ಟು ಹೆಚ್ಚು ಬಡ್ಡಿ ದೊರೆಯುತ್ತದೆ.
2) 3 ಮರಗಳು ಮತ್ತು 4 ಹಕ್ಕಿಗಳು
3) (123*8) + 4+5+6+9–7
4) ಈಗಿನ ಮಗನ ವಯಸ್ಸು 30 ವರ್ಷ ಮತ್ತು ತಂದೆಯ ವಯಸ್ಸು 60 ವರ್ಷ.
5) 8 ಸೀಟುಗಳು

**ನಿಮ್ಮ ಉತ್ತರಗಳು**

5 ಸರಿ ಇದ್ದರೆ – ಅತ್ಯುತ್ತಮ, 3–4 ಸರಿ ಇದ್ದರೆ – ಉತ್ತಮ 1–2 ಸರಿ ಇದ್ದರೆ – ಹೆಚ್ಚಿನ ಅಭ್ಯಾಸ ಅಗತ್ಯ.



✍ ಬಿ.ಈ. ಗೋವಿಂದ್
9167762988

## ದೇಶ್ ಕುಲಕರ್ಣಿ ರಾಮರಾಯರು (ಡಿ.ರಾಮರಾಯರು)

ಆರ್. ರಮೇಶ್

ನಮ್ಮವರು

ಸರ್ಜಾಪುರದ ಸುಬ್ಬಣ್ಣ ಮತ್ತು ರುಕ್ಮಣಮ್ಮ ದಂಪತಿಗಳ ಪುತ್ರರಾದ ರಾಮರಾಯರು ಜನಿಸಿದ್ದು 1884ರಲ್ಲಿ. ಒಡಹುಟ್ಟಿದವರು ಲಕ್ಷ್ಮೀದೇವಮ್ಮ, ಗೋವಿಂದರಾಯರು ಮತ್ತು ಕೃಷ್ಣರಾಯರು (ಬಾಲಕೃಷ್ಣರಾಯರು). ಇವರ ಪತ್ನಿ ಪಾರ್ವತಮ್ಮ, ಮಗಳು ಶಾರದಮ್ಮ ಮತ್ತು ಅಳಿಯ ಶಿವಶಂಕರಮೂರ್ತಿ. ಶ್ರೀಯುತರ ನಾಮಧೇಯದ ಹಿಂದಿನ ಇನಿಶಿಯಲ್ಸ್ "ಡಿ" ಎನ್ನುವುದು ಇವರ ಪೂರ್ವಜರಿಗೆ ಸಂದಿರುವ ಗೌರವವಾದ "ದೇಶ್ ಕುಲಕರ್ಣಿ" ಎಂಬುದನ್ನು ಸೂಚಿಸುತ್ತದೆ. ರಾಮರಾಯರ ಪೂರ್ವಜರು ಕ್ಷಾಮದ ಕಾಲದಲ್ಲಿ ಗ್ರಾಮಸ್ಥರಿಗೆ ಅವಶ್ಯಕವಾದ ದವಸ, ಧಾನ್ಯಗಳನ್ನು ದಾನವಾಗಿ ನೀಡಿದ್ದುದರಿಂದ ಮೈಸೂರು ಮಹಾರಾಜರು ಈ ಗೌರವ ಬಿರುದು ನೀಡಿ, ಇದನ್ನು ಇವರ ಮುಂದಿನ ಪೀಳಿಗೆಯವರೂ ತಮ್ಮ ನಾಮಧೇಯದೊಂದಿಗೆ ಸೇರಿಸಿಕೊಳ್ಳಬಹುದು ಎಂದಿದ್ದರು. ಇದು ಒಂದು ಹೆಮ್ಮೆಯ ವಿಷಯ.ರಾಮರಾಯರು ವಿದ್ಯಾಭ್ಯಾಸದ ನಂತರ ವೃತ್ತಿ ಜೀವನವನ್ನು ಪೋಲೀಸ್ ಇಲಾಖೆಯಲ್ಲಿ ಆರಂಭಿಸಿ ವಿವಿಧ ಹುದ್ದೆಯಲ್ಲಿದ್ದರು. ನಂಜನಗೂಡು, ತುಮಕೂರು, ಮಾಲೂರು ಮುಂತಾದ ಕಡೆಗಳಲ್ಲಿ ಸೇವೆ ಸಲ್ಲಿಸಿದರು.

ಮೈಸೂರು ಮಹಾರಾಜರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ವಿವಾಹದ ಸಂದರ್ಭದಲ್ಲಿ ಸಲ್ಲಿಸಿದ ಉತ್ತಮ ಸೇವೆಗಾಗಿ ರಾಮರಾಯರಿಗೆ ಕೈಗಡಿಯಾರವೊಂದು ಉಡುಗೊರೆಯಾಗಿ ದೊರಕಿದ್ದುದು ಒಂದು ವಿಶೇಷ. ಸಬ್ ಇನ್ಸ್‌ಪೆಕ್ಟರ್ ಆಗಿ ನಿವೃತ್ತಿ ಹೊಂದಿದ ಮೇಲೆ ಬೆಂಗಳೂರಿನ "ಬಸವನಗುಡಿ ಯೂನಿಯನ್ ಸರ್ವೀಸ್ ಕ್ಲಬ್"ನಲ್ಲಿ ದೀರ್ಘ ಕಾಲದವರೆಗೂ ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರ ಕಾರ್ಯಾವಧಿಯಲ್ಲಿ ಕ್ಲಬ್ಬಿನ ಆರ್ಥಿಕ ಸ್ಥಿತಿ ಬಹು ಮಟ್ಟಿಗೆ ಮೇಲ್ಮಟ್ಟಕ್ಕೆ ತಲುಪಿತು. ಈ ಅವಧಿಯಲ್ಲಿ ಶ್ರೀಯುತರ ಸ್ನೇಹ ಬಳಗದಲ್ಲಿ ಪ್ರಸಿದ್ಧ ವ್ಯಕ್ತಿಗಳಾದ ನಮ್ಮವರೇ ಆದ ದಾರ್ಶನಿಕ ಪೂಜ್ಯ ಡಿ.ವಿ.ಜಿ, ಸಾಹಿತಿಗಳಾದ ನವರತ್ನರಾಮರಾವ್, ಟಿ.ಎಸ್.ವೆಂಕಣ್ಣಯ್ಯ, ಬೆಳ್ಳಾವೆ ವೆಂಕಟರಮಣಪ್ಪ, ಮೈಸೂರು ಘನವೆತ್ತ ಸರ್ಕಾರದ ಆಯುಕ್ತ ಟಿ.ವಿ.ಎ.ಈಶ್ವರನ್, ಮುಖ್ಯ ಶಸ್ತ್ರ ಚಿಕಿತ್ಸಕರಾದ ಟಿ.ಶೇಷಾಚಲಂ, ಉಪಕುಲಪತಿ ಹಾಗೂ ಮುಖ್ಯ ನ್ಯಾಯಾಧೀಶರಾದ ಶೃಂಗಾರವೇಲ್ ಮೊದಲಿಯಾರ್, ಎ.ವಿ.ಕೃಷ್ಣಮೂರ್ತಿ ಮತ್ತು ಇನ್ನೂ ಹಲವರಿದ್ದರು. ರಾಮರಾಯರಿಗಿದ್ದ ಕಾರ್ಯಕ್ಷಮತೆ, ಪ್ರಾಮಾಣಿಕತೆ, ನಿಸ್ಪೃಹತೆ, ವ್ಯವಸ್ಥಿತ ಜೀವನ ಶೈಲಿ, ಸಮಯ ಪರಿಪಾಲನೆ ಎಲ್ಲರಿಗೂ ಮಾರ್ಗದರ್ಶನ ಮಾಡುವಂತಹುದು. ಈ ವ್ಯಕ್ತಿತ್ವದಿಂದಲೇ ಅವರನ್ನು "ಬೆಂಕಿ ರಾಮರಾಯರು" ಮತ್ತು ಪೋಲೀಸ್ ಇಲಾಖೆಯಲ್ಲಿ ದ್ದುದರಿಂದ "ಪೋಲೀಸ್ ಮಾವ" ಎಂದೇ ಗುರುತಿಸುತ್ತಿದ್ದರು. ರಾಮರಾಯರು 89 ವರ್ಷಗಳ ತುಂಬು ಜೀವನ ನಡೆಸಿ 1973ರಲ್ಲಿ ಇಹಲೋಕ ತ್ಯಜಿಸಿದರು. ಅವರ ಕೊನೆಯ ದಿನಗಳನ್ನು ಸೋದರಳಿಯನಾದ ಇಂದಿನ ಕಾರ್ಯಕಾರಿ ಸಮಿತಿಯ ಸದಸ್ಯರಾದ ಬಿ.ಸುಬ್ರಹ್ಮಣ್ಯಮ್‌ರವರ ತಂದೆ ಶ್ರೀನಿವಾಸಮೂರ್ತಿಯವರ ಆಶ್ರಯದಲ್ಲಿ ಕಳೆದರು. ಇಂತಹ ವಿಶೇಷ ವ್ಯಕ್ತಿಗಳು ಬೃಹಚ್ಚರಣ ಸಮುದಾಯದವರು ಎಂದು ಪರಿಚಯಿಸಲು ಅವಕಾಶವಾಗಿದ್ದಕ್ಕೆ ಸಂತಸವಾಗುತ್ತದೆ.

## ಜಗತ್ತು - ಜೀವ, ಜೀವನ ರಹಸ್ಯ?

ಜನನದ ಜಾಣ್ಮೆಯ ಮರಣದ ಮಾಯೆಯ ಜನನ ಮರಣದ ಪರಿಯ ಅರಿಯಲೆಂತು? ಜನನವಾದೊಡನೆ ಜಗಕೆ ಆನಂದ, ಜೀವಿ ಬಂತೆಂದು ಹನನವಾದೊಡೆ ಅರಿಯಲೆಂತು ಈ ಜಗವ ? ಯಾವ ಜೀವಿಗೆ ಯಾವ ದೇಹವೋ ಬಳಿಕ ಆ ಘನ ಚೈತನ್ಯ ಎಲ್ಲೋ? ಬಾಲತನದ ಆ ಸುಂದರ ತನವೆಲ್ಲಿ? ಪ್ರಾಯದಿ ಬಂದ ಮದದ ತನುವೆಲ್ಲಿ? ವೃದ್ಧಾಪ್ಯ ಅರಿಯಲು ಅರಿವೇ ಇಲ್ಲ. ಎಲ್ಲಾ ಮರೆವು. ಶಕ್ತಿ ಹೀನ, ಯಾರಿಗೂ ಬೇಡ, ತನಗೂ ಬೇಡ ಜೀವ ಹೊರೆಯಾಗಿ ಬಾಳು ಬರಡು ಎನ್ನಿಸುವುದು ಇದಕ್ಕೆ ಪರಿಹಾರ?

**ದಿಟ್ಟಿಯನು ಕೊಟ್ಟವನು ದಿಟ್ಟಿಗೆ ಕಾಣನೆ**
**ಅಟ್ಟಿದನೆ ನಮ್ಮ ಈ ಕೆಟ್ಟ ಜಗದೊಳಗೆ**
**ಅಟ್ಟುವನೆ ಕುಟ್ಟುವನೆ ಕಟ್ಟುವನೆ ಮುಟ್ಟುವನೆ**
**ವಿಠಲಾ ಎನಲು ದಿಟ್ಟಿಸಿ ಕಾಯದಿಹನೆ**

**ಹರಣ ಹೋಗುವ ಮುನ್ನ ಮರಣ ಬರುವಾ ಮುನ್ನ**
**ಕರುಣಾಕರ ಪೊರೆಯೋ ಎಂದು ಬೇಡವೋ**
**ಚರಣಕ್ಕೆ ಶರಣುನಾ ಕಾಯೋ ಲಕ್ಷ್ಮೀ ರಮಣ**
**ಕರುಣಂದಿ ಕಾಯೋ ಕೇಶವೇ ಎನ್ನೋಣ?"**

ಎಂಬ ಸಂತ ವಾಕ್ಯ, ಜೀವಕ್ಕೆ ಅಭಯ ಕೊಡುತ್ತದೆ.

ಶ್ರೀಪತಿ ಅಂಕಿತದ ದಾಸರು. ನಮ್ಮ ಪ್ರಾಚೀನ ಕರ್ಮದ ಹೊರೆ ಹೊತ್ತು ಬಂದಿದ್ದೇವೆ. ದೇವಾ ನಮಗೆ ಅನುಕೂಲದ ಇಂದ್ರಿಯ. ಮನ, ಬುದ್ಧಿ ಇತ್ತು ಸೃಷ್ಟಿಸಿದೆಯಲ್ಲಾ ನಿನ್ನ ಕರುಣೆ ಅಪಾರ. "ಇಷ್ಟು ದಯೆ ಮಾಡಿದ್ದೆ ಅತಿ ಸೋಜಿಗ! ಸೃಷ್ಟಿದಾಯಕ ಭ್ರಷ್ಟ ಮಾನವನಲ್ಲಿ ಭಕ್ತಿ ಗೋಸುಗ ನಿನ್ನ ಭಜಿಸಲಿಲ್ಲ. ಮುಕ್ತಿ ಗೋಸುಗ ನಿನ್ನ ಬಯಸಲಿಲ್ಲ. ವಿರಕ್ತಿ ಎಂಬೋದು ನೀನೆ ಬಲ್ಲೆ ತಂದೆ ಎಂದು ಅಂತಃಕರಣ ಕರಗುವಂತೆ. ಮೊರೆ ಇಟ್ಟಿದ್ದಾರೆ. ದೇಶ ವಿದೇಶ ತಿರುಗಿ ರಾಶಿ ಧನ ಮನೆಗಾಗಿ ಆಶೆ ಪೂರೈಸದೆ ಆಯಾಸದಿಂದ ಹೇಸಿ ಜನರೊಳು ತಿಂದು ವಾಸುದೇವನೇ ನಿನ್ನ ಲೇಸಾಗಿ ಸ್ಮರಿಸದೆಲೆ ಅಭಾಸನಾದೆ॥ ಎಂಬ ವಾಕ್ಯ ಅರ್ಥಪೂರ್ಣವಾಗಿದೆ. ಇದು ಭಕ್ತರ ಮೊರೆ. ಆದರೆ "ಪೂಜ್ಯ ಡಿ.ವಿ.ಜಿ. ಅವರು **ಹಾಗೋ ಹೀಗೋ ಹೇಗೋ ಜನುಮದ ಕಥೆ ಮುಗಿಯುವುದು ಈಗಲೋ ಎಂದೋ ಮುಗಿಯುವುದು, ಸಾಗಿ ಮುಗಿಸುವುದು, ಮುಗಿದು ಮರೆವುದದೆ, ನರಸುಕೃತ, ಭೂಗತ ಸ್ಥಿತಿ ಮುಕುತಿ ಮಂಕುತಿಮ್ಮ.**

**ಬಹು ರಹಸ್ಯವೋ ಸೃಷ್ಟಿ ಬಹು ರಹಸ್ಯವೋ ಜೀವ, ಅಹುದಲ್ಲದೆವಿದೆಂಬ ವಾದ ಬರೀ ಹರಟೆ॥ ಗುಹೆಯೊಳಿ ಹುದೆಲ್ಲ ತತ್ವಗಳ ತತ್ವದ ಮೂಲ, ಬಹಿರಂತರ ರಹಸ್ಯ, ಮಂಕುತಿಮ್ಮ.**

ಗಾಳಿ ಬೀಸುತಿದೆ ಧೂಳಿನಲಿ, ಜಡಕಣ, ಚೈತನ್ಯ ಕಣ ಹೊತ್ತಿರುತ್ತದೆ. ತಿಳಿಯು ವುದಿಲ್ಲ, ಆ ಸೂತ್ರ ಯಾವುದು ? ಗೊತ್ತಿಲ್ಲ. ಹಾಗೆ ಋಣದ ಜಾಲ ಅನಂತ ತಿನ್ನುವ ಅನ್ನ ಕುಡಿಯುವ ನೀರು, ಉಸಿರಾಡುವುದು ಯಾವುದೂ ಹೊರ ನೋಟಕ್ಕೆ ತಿಳಿಯದು. ತಿಳಿದೆ ಎಂದರೆ ಅದು ಬರೀ ಭ್ರಾಂತಿ ಅಷ್ಟೇ, ಆದರೆ ಈ ವಿಷಯ ಇತರರ ಮೇಲೆ ಹೇರಬೇಡ, ಅವರಿಗೆ ತೋರಿದ ರೀತಿ ನಡೆದುಕೊಳ್ಳಿರಿ, ನಿನಗೇಕೆ ಗುರುಪದವಿ? ನಮ್ಮ ಚಿಂತೆ ನಮಗೆ ಸಾಕು, ಒಂದೊಂದು ಜೀವವು ಸ್ವಾನುಭವದಿ ಪಕ್ವವಾಗಬೇಕು. ಸುಖ ದುಃಖಗಳ ಅನುಭವಿಸಿ 'ಮಾವನೆಟ್ಟು ಜೀವ ಉಣಲು ಸಿದ್ಧನಿರು" ಎಂದರೆ ಭೂರಸದ ವಿಭಾಗಕ್ಕೆ ಸೇರಿದ್ದು (ಡಿ.ವಿ.ಜಿ) ಹೇಳಿದ್ದಾರೆ. ಹಾಗೆ ಬ್ರಹ್ಮ ಹಿಮಾಚಲದಂತೆ ಅದರ ದ್ರವರೂಪ ಗಂಗೆ. ಪ್ರಪಂಚದ ಸಂಸಾರ, ವ್ಯವಹಾರ ಎಲ್ಲವೂ ಅದರಿಂದಲೇ ಪರಮಾರ್ಥಕ್ಕೆ ಒಂದು ಕಣ್ಣು. ಇಹದ ವ್ಯವಹಾರಕ್ಕೆ ಮತ್ತೊಂದು ಕಣ್ಣು, ಬೇರೆ ಬೇರೆ ತಿಳಿದರೆ ಪೂರ್ಣ ದೃಷ್ಟಿ ಅಲ್ಲ. ವಿಶ್ವಕ್ಕೆ ಒಡೆಯ ವಿಶ್ವೇಶ್ವರ ಇಹಪರ ಎರಡೂ ಅವನದೇ ಬ್ರಹ್ಮ ವಸ್ತು ಬೇರೆಯಲ್ಲವೆಂಬ ಆಂತರ್ಯ ರಹಸ್ಯ ತಿಳಿದರೆ ಬಾಳು ಒಳ್ಳೆಯ ಕಡೆ ತಿರುಗಲು ಸಾಧ್ಯ. ಹಗುರ ಬಾಳು ಜ್ಞಾನ ಗುರು ಆಶೀರ್ವಾದ ದೈವಕೃಪೆ ಎಂದು ತಿಳಿದರೆ ಸಮಸ್ಯೆಗಳ ಗಂಟು ಸಡಿಲವಾಗುತ್ತದೆ. ಗಂಟು ಬಿಡಿಸಲಿಕ್ಕೆ ತುಂಬಾ ಸಾಧನೆ ಅಗತ್ಯ ಅದಕ್ಕೆ "ಸುಮ್ಮನಿರು ನಿನ್ನ ಪಾಡನು ಪಡುತ ತುಟಿ ಬಿಗಿದು ನೆಮ್ಮದಿಯ ದಾರಿಯುಂಟು" ಮಂಕುತಿಮ್ಮ.

ಭ್ರಮರಾ ಗೋಪಿನಾಥ್

# ಮಂಕುತಿಮ್ಮನ ಕಗ್ಗ

**ಅರೆಗಣ್ಣು ನಮದೆಂದು ಕೊರಕೊರಗಿ ಫಲವೇನು?**
**ಅರೆ ಬೆಳಕು ಧರೆಯೊಳೆಂದೊರಲಿ ಸುಖವೇನು ?**
**ಇರುವ ಕಣ್ಣಿರುವ ಬೆಳಕಿನೊಳಾದನಿತ ನೋಡಿ**
**ಪರಕಿಸಿದೊಡದು ಲಾಭ ಮಂಕುತಿಮ್ಮ ॥**

ನಮ್ಮದು ಅರ್ಧ ಕಣ್ಣು ಎಂದು ಕೊರಗಿದರೆ ಫಲವೇನು? ಧರೆಯಲ್ಲಿ ಅರೆ ಬೆಳಕು ಎಂದು ಕೂಗಿದರೆ ಸುಖವೇನು? ಅದರ ಬದಲು ದೇವರು ನಮಗೆ ದಯಪಾಲಿಸಿರುವ ಕಣ್ಣುಗಳ ಶಕ್ತಿಯ ಮೂಲಕ ಬರುವ ಬೆಳಕಿನಿಂದ ನೋಡಿದರೆ ವಸ್ತುಸ್ಥಿತಿ ಅರಿವಾಗುತ್ತದೆ. ಅದರಿಂದ ನಿರಾಶ ರಾಗದೆ ದೇವರು ನಮಗೆ ಕೊಟ್ಟಿರುವ ಬುದ್ಧಿಶಕ್ತಿಗಳನ್ನು ಉಪಯೋಗಿಸಿ ನಮ್ಮ ಜೀವನವನ್ನು ಸುಗಮ ಮಾಡಿಕೊಳ್ಳಬಹುದು ಎಂಬುದಾಗಿ ಡಿ.ವಿಜಿ. ಅವರು ತಿಳಿಯಪಡಿಸಿದ್ದಾರೆ.

ಭಗವಂತನ ಸೃಷ್ಟಿ ರಹಸ್ಯವನ್ನು ಯಾರು ತಾನೇ ಅರಿಯಬಲ್ಲರು? ಭಗವಂತನ ಗೂಢ, ಗುಹ್ಯ ಗಂಭೀರ ಎಂದು ಅವರ ಮಹಿಮೆಯನ್ನು ಭಕ್ತರು ವರ್ಣಿಸಿದ್ದಾರೆ. ಅವನ ಆಂತರ್ಯವನ್ನು ಅರಿಯಲು ಅಂತಃ ಚಕ್ಷುವಿನಿಂದ ಮಾತ್ರ ಸಾಧ್ಯ. ಆದರೆ ನಮ್ಮ ಭೌತಿಕ ಕಣ್ಣುಗಳಿಂದ ಸಾಮರ್ಥ್ಯ ವಿದ್ದಷ್ಟೇ ತಿಳಿಯಬೇಕಾಗುತ್ತದೆ.

ಡಾ. ಡಿ.ವಿ.ಜಿ. ಅವರು ಈ ಮುಕ್ತಕದಲ್ಲಿ ಹೀಗೆ ಹೇಳಿದ್ದಾರೆ : ಹೌದು ನಮ್ಮದು ಮಂದಾಕ್ಷಿ ಲೋಕದ ವಿಷಯವನ್ನು ತಿಳಿಸುವ ಶಕ್ತಿಯೂ ಮಿತವಾಗಿ ಅವುಗಳ ವ್ಯಾಪ್ತಿಯೂ ಕಡಿಮೆಯಾಗಿರುವುದರಿಂದ ನಮ್ಮ ಜೀವನದ ಪಥವೂ ಸಂಜೆಯ ಮಬ್ಬು ಬೆಳಕಿನಂತೆಯೇ ಇದೆ. ಇದ್ದಕ್ಕಿದ್ದಂತೆ ಯಾವುದೇ ವಸ್ತು ಆಕರ್ಷಣೆಗೆ ಒಳಗಾಗಿಸುತ್ತದೆ. ಅದನ್ನು ಹಿಡಿಯಲು ಹೋದರೆ ಕೈಗೆ ಎಟಕುವುದಿಲ್ಲ. ಆದುದರಿಂದ ನಮ್ಮ ಬದುಕಿಲ್ಲಿ 'ಸಂದೇಹವೇ ನಮ್ಮ ಗತಿ' ಎಂದು ತಿಳಿಸಿದ್ದಾರೆ.

ಯಾವುದೇ ವಿಷಯವನ್ನು ತೆಗೆದುಕೊಂಡರೂ ಅದರ ಸತ್ಯದ ಅರಿವಾಗ ಬೇಕಾದರೆ ಜ್ಞಾನದ ಬೆಳಕು ಬೇಕು. ಜ್ಞಾನಕ್ಕೆ ಪ್ರತೀಕವಾದ ಸೂರ್ಯನ ಪ್ರಖರವಾದ ಬೆಂಕಿಯ ಉಂಡೆ ಬೆಳಕಿನಿಂದಾಗಲಿ ಅಥವಾ ಕತ್ತಲಿದ್ದರೂ ಸಮೀಪದ ವಸ್ತುಗಳನ್ನು ನಿಚ್ಚಳವಾಗಿ



ತೋರಿಸುವ ಹಣತೆಯ ಬೆಳಕು ಅಲ್ಲವಾದರೂ ನಮಗೆ ವಸ್ತು ಸ್ಥಿತಿಯ ಅರಿವಾಗುತ್ತದೆ. ಪೂರ್ಣ ಕತ್ತಲೆಯೇ ಇದ್ದರೆ ನಮಗೆ ಯಾವ ಶಂಕೆಗೂ ಎಡೆ ಇರದು. ಆದರೆ ಈ ಅಧಂಬರ್ಧ ಬೆಳಕು ಅಡ್ಡ ಗೋಡೆಯ ಮೇಲೆ ದೀಪ ಇಟ್ಟಂತೆ ಹಾಗೂ ಇಲ್ಲ ಹೀಗೂ ಇಲ್ಲ ಎನ್ನುವಂತೆ ಇರುತ್ತದೆ. ಇಂಥ ಬೆಳಕಿನಿಂದ ತಂಟೆ, ಗೊಂದಲ, ಗಲಿಬಿಲಿ, ಶಂಕೆ ಉಂಟಾಗಿ ಕಷ್ಟಕರವಾಗುತ್ತದೆ. ಅರೆ ತಿಳಿವು, ಅರೆ ಸುಳಿವು ಅರೆ ಬೆಳಕು ಇವು ಗೋಜಲು ಗೋಜಲಾಗಿ ಗೊಂದಲವನ್ನು ಉಂಟುಮಾಡುತ್ತದೆ.


ಮುಂದಿನ ಮುಕ್ತಕದಲ್ಲಿ ಹೀಗೆ ಹೇಳಿದ್ದಾರೆ : ಭಗವಂತಹ ರಹಸ್ಯ ತನ್ನ ನಿಜರೂಪವನ್ನು ತೋರದೆ ಮಸುಕಾದ ಪರದೆಯೊಳಗೆ ಅಡಗಿದ್ದರೆ ಇರಲಿ, ಬಟ್ಟ ಬಯಲಾಗಿರುವ ವಿಷಯಕ್ಕೆ ಯಾರು ತಾನೇ ಕುತೂಹಲ ತೋರುತ್ತಾರೆ. ಅಡಗಿರುವ ಸತ್ಯವನ್ನು ಅರಿಯಲು ನಾವು ನಮ್ಮ ಅಂತರಂಗದ ಕಣ್ಣನ್ನು ತೆರೆದು ಆ ಸತ್ವವನ್ನು ಆಸಕ್ತಿ ತೋರಿ ಕಂಡುಹಿಡಿಯೋಣ.

ಮುಂದಿನ ಮುಕ್ತಕದಲ್ಲಿ ಡಿ.ವಿ. ಗುಂಡಪ್ಪನವರು ಇದಕ್ಕೆ ಒಂದು ಉಪಾಯವನ್ನು ಹೇಳಿದ್ದಾರೆ. "ಅವರವರ ದರುಶನಕೆ ಅವರವರ ವೇಷದಲ್ಲಿ ಅವರವರ ಭಾವಕ್ಕೆ" ಅನುಗುಣವಾಗಿ ಪ್ರತಿಯೊಬ್ಬನಲ್ಲೂ ಸ್ವಂತಿಕೆಯಾದ ಜ್ಞಾನ ಇರುತ್ತದೆ. ಅರ್ಧ ಕಣ್ಣು ಅರೆ ಬೆಳಕು ಎಂದು ಕೊರಗುವುದರ ಬದಲು ಪ್ರತಿಯೊಬ್ಬರ ಸತ್ಯಾಂಶಗಳನ್ನು ತಿಳಿದು ಅದನ್ನು ಒಂದೆಡೆ ಸೇರಿಸಿ ಸ್ವಾರ್ಥವನ್ನು ಬಿಟ್ಟು ಒಮ್ಮತದಿಂದ ಅನುಸರಿಸಿದರೆ ಪರಮ ಸತ್ಯದ ದಾರಿಯಲ್ಲಿ ನಾವು ಮುಂದೆ ಸಾಗಬಹುದು ಎಂದು ತಿಳಿಸಿದ್ದಾರೆ.

ಈ ಮುಕ್ತಕದ ಮೂಲಕ ನಮಗೆ ಒಂದು ಸಂದೇಹವನ್ನು ಸಾರಿದ್ದಾರೆ. ಅಹಂಕಾರ, ಅಂಧಾನುಕರಣೆಯ ಭೇದ ಭಾವಗಳನ್ನು ಅಳಿಸಿ ಸಹಮತದಿಂದ ನಾವೆಲ್ಲರೂ ಒಂದಾಗೋಣ. ಅಂತಃಸತ್ವದಿಂದ ಸತ್ಯದ ಕಡೆಗೆ ಸಾಗೋಣ ಎನ್ನುತ್ತಾರೆ.

✍ ಜಿ.ಪಿ. ಲಕ್ಷ್ಮೀದೇವಿ
080 23444798

## ಒದುಗರ ಪತ್ರಗಳು



ಮಾನ್ಯ ಶ್ರೀ ಎಚ್.ಪಿ. ಶ್ರೀನಿವಾಸ್‌ರವರಿಗೆ ನಮಸ್ಕಾರ.

ತಾವು ನಮ್ಮ ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ಸೂಚಿಸಿ ಬರೆದಿರುವ ಪತ್ರಕ್ಕೆ ಅಧ್ಯಕ್ಷ ಶ್ರೀ ಸೋಮಸುಂದರ ರವರು ತಮ್ಮ ಅಭಿಮಾನಕ್ಕೆ ಕೃತಜ್ಞತೆ ಸಲ್ಲಿಸಿರುತ್ತಾರೆ. ತಾವು ಸಂಘದ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಕಾರ್ಯಕಾರಿ ಸಮಿತಿ ಚಿರಋಣಿ.

ತಮಗೆ ಶುಭವಾಗಲಿ.

ಸಂ.
ನಟರಾಜ್

Book-Post

To,

If un Delivered please return to :
President
**'Bruhacharana Sangha'** No. 8, 3rd Cross, Annaiyyappa Block,
Kumarapark West, Bengaluru-560 020.

Published by Sri S. Somasundara, President, 'BRUHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Keerthi Printers,** Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, 080-26722034